ಸರ್ವ ಧರ್ಮ ಸಮಭಾವ

ಡಾ. ಇಬ್ರಾಹೀಮ್ ಸಈದ್

ಪರಮ ದಯಾಮಯನೂ ಕರುಣಾಳುವೂ ಆದ ಅಲ್ಲಾಹನ ನಾಮದಿಂದ

ಪ್ರಕಾಶಕರ ಮಾತು

"ನನಗೆ ಮುಂಬೈಗೆ ಹೋಗಬೇಕಾಗಿದೆ. ಆ ಕಡೆ ಹೋಗುವ ಗಾಡಿ ಯಾವ ಪ್ಲಾಟ್ ಫಾರ್ಮ್‌ನಲ್ಲಿದೆ" ಎಂದು ಪ್ರಯಾಣಿಕನೊಬ್ಬ ಬೆಂಗಳೂರು ರೈಲು ನಿಲ್ದಾಣದ ವಿಚಾರಣಾ ಕೌಂಟರ್‌ನ ಅಧಿಕಾರಿಯನ್ನು ಕೇಳಿದ. "ಅಗೋ ಅಲ್ಲಿ ಹತ್ತು ಹನ್ನೆರಡು ಪ್ಲಾಟ್‌ಫಾರ್ಮ್‌ಗಳಿವೆ. ಪ್ರತಿಯೊಂದರಲ್ಲೂ ಗಾಡಿಗಳು ಬರುತ್ತಲೂ ಹೋಗುತ್ತಲೂ ಇರುತ್ತವೆ. ಆ ಪೈಕಿ ಯಾವ ಗಾಡಿಯನ್ನು ಬೇಕಾದರೂ ಹತ್ತಿ ಕುಳಿತುಕೊಳ್ಳಿ. ನೀವು ಮುಂಬೈ ಮುಟ್ಟುವಿರಿ" ಎಂದು ಆ ಅಧಿಕಾರಿ ಉತ್ತರಿಸಿದ.

ಆಗ ಆ ಪ್ರಯಾಣಿಕನ ಪ್ರತಿಕ್ರಿಯೆ ಏನಾಗಿರಬಹುದು? ಅವನು ಅದನ್ನು ಕೇಳಿ ಚಿಂತಾಕ್ರಾಂತನಾಗಲಾರನೇ? ಆದರೆ ಅದೇ ವಿಷಯ ದೇವರು, ಧರ್ಮ, ಮೋಕ್ಷ ಇತ್ಯಾದಿಗಳ ಕುರಿತು ಯಾರಾದರೂ ಹೇಳಿದರೆ ನಾವು ಅದನ್ನು "ಸರ್ವ ಧರ್ಮ ಸಮಭಾವ" ಎಂದು ಪುರಸ್ಕರಿಸುತ್ತೇವೆ. ಆತನನ್ನು ಮಹಾ 'ಪರಧರ್ಮ ಸಹಿಷ್ಣು' ಎಂದು ಕೊಂಡಾಡುತ್ತೇವೆ. ವಾಸ್ತವದಲ್ಲಿ ಜಗತ್ತಿನ ಎಲ್ಲ ಧರ್ಮಗಳೂ ಸಮಾನವೇ? ಯಾವ ಧರ್ಮವನ್ನು ಅನುಸರಿಸಿದರೂ ನಮ್ಮ ಸೃಷ್ಟಿಕರ್ತನನ್ನು ಅನುಸರಿಸಿ ದಂತಾಗುವುದೇ? ಈ ವಿಭಿನ್ನ ಮಾರ್ಗಗಳ ಪೈಕಿ ಯಾವುದನ್ನು ಅವಲಂಬಿಸಿದರೂ ದೇವ ಸಂಪ್ರೀತಿ ಮತ್ತು ಪರಲೋಕ ಮೋಕ್ಷ ಸಿಗುತ್ತದೆಯೇ ಎಂಬಿತ್ಯಾದಿ ಪ್ರಶ್ನೆಗಳನ್ನು ವೈಚಾರಿಕವೂ ವಸ್ತುನಿಷ್ಠವಾಗಿಯೂ ಅಭ್ಯಸಿಸುವ ಒಂದು ಪ್ರಯತ್ನ ಈ ಪುಸ್ತಕದಲ್ಲಿ ಮಾಡಲಾಗಿದೆ. ಧರ್ಮದ ಬಗ್ಗೆ ಸರಿಯಾದ ನಿಲುವು ತಾಳಲು ಇದು ವಾಚಕರಿಗೆ ಸಹಕಾರಿಯಾದೀತೆಂದು ನಿರೀಕ್ಷಿಸುತ್ತೇವೆ.

ಶಾಂತಿ ಪ್ರಕಾಶನ

ಅನುಕ್ರಮಣಿಕೆ

ಜನರೇ, ನಾವು ನಿಮ್ಮನ್ನು ಒಬ್ಬ ಪುರುಷ ಮತ್ತು ಒಬ್ಬ ಸ್ತ್ರೀಯಿಂದ ಉಂಟು ಮಾಡಿದೆವು. ತರುವಾಯ ನೀವು ಪರಸ್ಪರ ಪರಿಚಯ ಪಟ್ಟುಕೊಳ್ಳಲಿಕ್ಕಾಗಿ ನಿಮ್ಮ ಜನಾಂಗಗಳನ್ನೂ ಗೋತ್ರಗಳನ್ನೂ ಮಾಡಿದೆವು. ನಿಮ್ಮ ಪೈಕಿ ಅತ್ಯಧಿಕ ಧರ್ಮನಿಷ್ಠನೇ ವಾಸ್ತವದಲ್ಲಿ ಅಲ್ಲಾಹನ ಬಳಿ ಅತಿ ಹೆಚ್ಚು ಗೌರವಕ್ಕೆ ಪಾತ್ರನು. ನಿಶ್ಚಯವಾಗಿಯೂ ಅಲ್ಲಾಹನು ಸರ್ವಜ್ಞನೂ ವಿವರಪೂರ್ಣನೂ ಆಗಿರುತ್ತಾನೆ.

(ಪವಿತ್ರ ಕುರ್‌ಆನ್, 49:13)

ಐಕ್ಯದ ಹಂಬಲ

ಮನುಷ್ಯರ ಮಧ್ಯೆ ಐಕ್ಯವಿರಬೇಕು. ಇದು ಮಾನವನ ಒಂದು ಸಹಜ ಬಯಕೆ. ಈ ಬಯಕೆಯನ್ನು ಅನೇಕ ಮಹಾನ್ ವ್ಯಕ್ತಿಗಳು ವ್ಯಕ್ತಪಡಿಸಿದ್ದಾರೆ. ಒಬ್ಬ ಸಾಮಾನ್ಯ ಮನುಷ್ಯನಿಗೂ ಈ ವಿಷಯ ಸುಲಭವಾಗಿ ತಿಳಿಯುತ್ತದೆ. ಈ ಭಾವನೆಯನ್ನು ಎಲ್ಲರೂ ಮೆಚ್ಚುತ್ತಾರೆ, ಗೌರವಿಸುತ್ತಾರೆ.

ಮನುಷ್ಯರ ಮಧ್ಯೆ ಒಗ್ಗಟ್ಟು ಇರಬೇಕೆಂದು ಬಯಸುವ ಸಂವೇದನಾಶೀಲ ಜನರು, ಈ ಒಗ್ಗಟ್ಟು ಸಾಮಾನ್ಯ ಸ್ತರದಲ್ಲಿ ಮಾತ್ರವಲ್ಲ, ವಿಶ್ವಾಸ-ಶ್ರದ್ಧೆ ಮತ್ತು ಧರ್ಮದ ರಂಗದಲ್ಲೂ ಇರಬೇಕೆಂದು ಹಂಬಲಿಸುತ್ತಾರೆ. ಏಕೆಂದರೆ ಈ ರಂಗದಲ್ಲಿ ಐಕ್ಯವಿಲ್ಲದಿದ್ದರೆ ಇತರ ವಿಷಯಗಳಲ್ಲಿರುವ ಐಕ್ಯ ಮತ್ತು ಸಾಮರಸ್ಯ ಹೆಚ್ಚು ಉತ್ತೇಜನಕಾರಿ ಮತ್ತು ತೃಪ್ತಿಕರವಾಗಲಾರದು. ಏಕತೆಯ ಬಯಕೆ ಇರುವುದಾದರೆ ಅದು ಸಂಪೂರ್ಣ ಏಕತೆಯ ಬಯಕೆಯಾಗಿರಬೇಕು ಎಂಬುದು ಅವರ ನಿಲುವು.

ಧರ್ಮದ ರಂಗದಲ್ಲಿ ಜನರ ಮಧ್ಯೆ ಐಕ್ಯ ಸಾಧಿಸುವ ಬಯಕೆಯ ಒಂದು ಉನ್ನತ, ಪವಿತ್ರ ಮತ್ತು ಭಾವನಾತ್ಮಕ ಬಯಕೆಯಾಗಿದೆ. ಆದರೆ ಈ ಬಯಕೆ ಈಡೇರಬೇಕಾದರೆ ನಿಜವಾದ ಸತ್ಯಧರ್ಮವು ಯಾವುದೆಂಬುದನ್ನು ಮನುಷ್ಯನು ಕಂಡುಕೊಳ್ಳಲು ಪ್ರಯತ್ನಿಸಬೇಕು. ಅನಂತರ ಆ ಧರ್ಮವನ್ನು ಎಲ್ಲರೂ ಅಂಗೀಕರಿಸುವಂತೆ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಈ ರೀತಿ ಎಲ್ಲ ಜನರ ಅಥವಾ ಅವರ ಪೈಕಿ ಒಂದು ದೊಡ್ಡ ಸಂಖ್ಯೆಯ ಜನರ ಮಧ್ಯೆ ವಿಶ್ವಾಸ-ಶ್ರದ್ಧೆ ಮತ್ತು ಧರ್ಮದ ಸ್ತರದಲ್ಲಿ ಐಕ್ಯ ಮೂಡಿದರೆ ಖಂಡಿತ ಅದರಿಂದ ಆಶಾದಾಯಕ ಪರಿಣಾಮಗಳು ಉಂಟಾಗಬಹುದು. ಏಕೆಂದರೆ ಮನುಷ್ಯ ಜೀವನದಲ್ಲಿ ಅತ್ಯಂತ ಬಲಿಷ್ಠ ಶಕ್ತಿ ಧಾರ್ಮಿಕ ಭಾವನೆಯಾಗಿದೆ. ಅದು ಜೀವನದ ಸ್ಫೂರ್ತಿಯಾಗಿದೆ. ಈ ಭಾವನೆಯಲ್ಲಿ ಏಕತೆ ಸಾಧಿಸಲ್ಪಟ್ಟರೆ ಜೀವನದ ಉನ್ನತ ಮಟ್ಟದಲ್ಲಿ ಐಕ್ಯ ಸಾಧಿಸುವಲ್ಲಿ ನಾವು ಸಫಲರಾಗುವೆವು. ಅಂತಹ ಒಗ್ಗಟ್ಟಿನ ಬುನಾದಿಯು ಅತ್ಯಂತ ಬಲಿಷ್ಠ ಮತ್ತು ಆಳವಾಗಿರುವುದು.

ಆದರೆ ಧಾರ್ಮಿಕ ಸ್ತರದಲ್ಲಿ ಐಕ್ಯ ಸಾಧಿಸುವವರ ಪೈಕಿ ಹೆಚ್ಚಿನವರು ಈ ಸರಿಯಾದ ಮಾರ್ಗವನ್ನು ಅನುಸರಿಸುವ ಬದಲು ಬೇರೆ ಮಾರ್ಗವನ್ನು ಅನುಸರಿಸುತ್ತಾರೆ. ಅವರು ಸತ್ಯ ಶೋಧನೆಯಲ್ಲಿ ತಮ್ಮ ಸಾಮರ್ಥ್ಯವನ್ನು ವಿನಿಯೋಗಿಸುವ ಬದಲು ಸತ್ಯ ಶೋಧನೆಯ ದಾರಿಯನ್ನು ಮುಚ್ಚಿ ಬಿಡುವಲ್ಲಿಯೇ ತಮ್ಮ ಬುದ್ಧಿ ಮತ್ತು ಜ್ಞಾನದ ಸಾಮರ್ಥ್ಯಗಳನ್ನು ತೊಡಗಿಸುತ್ತಾರೆ. ಅವರು ಎಲ್ಲ ಪ್ರಚಲಿತ ಧರ್ಮಗಳನ್ನೂ ಸಮಾನವೆಂದು ಸಾರುವ ಮೂಲಕ ನಾವು ದೇಶದ ಭೌಗೋಳಿಕ ಸೀಮೆಯ ನೆಲೆಯಲ್ಲಿ ಮಾತ್ರವಲ್ಲ ಧಾರ್ಮಿಕ ನೆಲೆಯಲ್ಲಿಯೂ ಒಂದಾಗಿದ್ದೇವೆಂಬ ತಪ್ಪುಕಲ್ಪನೆಯನ್ನು ಜನರಲ್ಲಿ ಮೂಡಿಸುತ್ತಾರೆ. ನಮ್ಮ ಧರ್ಮಗಳು ಭಿನ್ನಭಿನ್ನವಾಗಿವೆ, ಪರಸ್ಪರ ವಿರುದ್ಧವಾಗಿವೆ ಮತ್ತು ಧಾರ್ಮಿಕ ನೆಲೆಯಲ್ಲಿ ನಾವು ಒಬ್ಬರಿಗೊಬ್ಬರು ಪರಕೀಯರಾಗಿದ್ದೇವೆಂಬುದು ಕೇವಲ ಒಂದು ಮಿಥ್ಯ ಕಲ್ಪನೆಯೆಂದು ಅವರು ಸಾರುತ್ತಾರೆ. ಎಲ್ಲ ಧರ್ಮಗಳೂ ಒಂದೇ. ಎಲ್ಲವೂ ಒಂದೇ ಧ್ಯೇಯದತ್ತ ನಮ್ಮನ್ನು ಸಾಗಿಸುತ್ತವೆ. ಎಲ್ಲ ಧರ್ಮಗಳಲ್ಲೂ ಒಂದೇ ಸತ್ಯ ಅಡಕವಾಗಿದೆ. ವ್ಯತ್ಯಾಸವಿರುವುದು ಮನುಷ್ಯನು ಅವುಗಳನ್ನು ತಿಳಿದುಕೊಳ್ಳುವುದರಲ್ಲಿ ಮಾತ್ರ. ಅದು ನಗಣ್ಯ. ಆದ್ದರಿಂದ ಈ ತಪ್ಪುಕಲ್ಪನೆಯನ್ನು ನೀಗಿಸಬೇಕು. ಜೀವನದ ಈ ಶಕ್ತಿಶಾಲಿ ಕ್ಷೇತ್ರದಲ್ಲಿ ನಮ್ಮ ಮಧ್ಯೆ ಸಾಮರಸ್ಯವಿದೆಯೆಂಬ ಭಾವನೆ ನಮ್ಮಲ್ಲಿ ದೃಢವಾಗಬೇಕು. ಈ ವಿಭಾಗದ ಜನರು ಈ ಶುಭ ವಾರ್ತೆಯನ್ನು ಎಷ್ಟು ಮಧುರವಾದ ಶೈಲಿಯಲ್ಲಿ ಮುಂದಿಟ್ಟರೆಂದರೆ ಜನರು ಅವರ ಮೋಡಿಗೆ ಮರುಳಾದರು. ನಮ್ಮಲ್ಲಿ ಪ್ರತಿಯೊಬ್ಬನ ಗುರಿಯೂ ಒಂದೇ ಆಗಿದೆ. ನಮ್ಮಲ್ಲಿರುವ ಪರಸ್ಪರ ಜಗಳ ಅರ್ಥಹೀನವಾಗಿದ್ದು ಅದು ನಮ್ಮ ಅಜ್ಞಾನದ ಫಲಶ್ರುತಿಯಾಗಿದೆ ಎಂಬ ಭಾವನೆ ವ್ಯಾಪಕವಾಗತೊಡಗಿತು.

❑

ಸರ್ವಧರ್ಮ ಸಮಾನತೆಯ ಪ್ರತಿಪಾದಕರು

ಸರ್ವ ಧರ್ಮಗಳೂ ಸಮಾನವೆಂಬ ಈ ಸಿದ್ಧಾಂತವನ್ನು ಬೆಂಬಲಿಸುವ ಅನೇಕ ಪ್ರಯತ್ನಗಳನ್ನು ಇತಿಹಾಸವು ನಮ್ಮ ಮುಂದಿಡುತ್ತದೆ. 'ಸರ್ವಧರ್ಮ ಸಮಭಾವ'ದ ಕೂಗು ಭಾರತೀಯ ಉಪಭೂಖಂಡವನ್ನು ದಾಟಿ ಪಾಶ್ಚಾತ್ಯ ರಾಷ್ಟ್ರಗಳಲ್ಲೂ ಮೊಳಗತೊಡಗಿತು. ಮಿಸ್ ಅಂಡರ್ ಹಿಲ್ ಹೀಗೆಂದಿರುವರು:

> ಬ್ರಾಹ್ಮಣ, ಸೂಫೀ ಅಥವಾ ಕ್ರೈಸ್ತ ಅಧ್ಯಾತ್ಮಿಕತೆಯಲ್ಲಿ ಅತ್ಯುನ್ನತ ಮಟ್ಟದಲ್ಲಿ ಯಾವುದೇ ದೊಡ್ಡ ವ್ಯತ್ಯಾಸವಿದೆಯೆಂದು ಯಾರೂ ಪ್ರಾಮಾಣಿಕವಾಗಿ ಹೇಳುವಂತಿಲ್ಲ. (Essentials of Mystics)

ಅವರ ಹೇಳಿಕೆಯ ಪ್ರಕಾರ, ಪಶ್ಚಿಮ ಮತ್ತು ಪೂರ್ವದ ಧರ್ಮಶಾಸ್ತ್ರ ವಿದ್ಯೆಯಲ್ಲಿ ಎಷ್ಟೇ ವ್ಯತ್ಯಾಸವಿದ್ದರೂ, ಉಭಯತರರ ಜೀವನದ ಆದರ್ಶದಲ್ಲಿ ಎಷ್ಟೇ ಭಿನ್ನತೆಯಿದ್ದರೂ ಮಹಾತ್ಮರ ಅನುಭವಗಳಲ್ಲಿ ಈ ಭಿನ್ನತೆ ಮತ್ತು ಸಂಘರ್ಷವು ಒಂದು ಉನ್ನತ ಭಾವನೆಯ ರೂಪ ತಾಳುತ್ತದೆ. ದೇವರ ಪ್ರೀತಿಯ ಅನುಭವದಲ್ಲಿ ಯಾವುದೇ ಭಿನ್ನತೆಯ ಸಾಧ್ಯತೆಯಿರುವುದಿಲ್ಲ. ಏಕೆಂದರೆ ಎಲ್ಲ ವಿವಿಧತೆಗಳು ಒಂದು ವಾಸ್ತವಿಕತೆಯಲ್ಲಿ ಲೀನವಾಗಿ ಬಿಡುತ್ತವೆ.

ಧಾರ್ಮಿಕ ಅನುಭವಗಳು ಅತ್ಯುನ್ನತ ಮಟ್ಟವನ್ನು ತಲುಪಿದಾಗ ಕ್ರೈಸ್ತ ಮತ್ತು ಕ್ರೈಸ್ತೇತರರ ಮಧ್ಯೆ ಯಾವುದೇ ವ್ಯತ್ಯಾಸ ಉಳಿಯುವುದಿಲ್ಲ. ಆಗಸ್ಟಿನ್ 'ತ್ರಿ ಏಕತ್ವ'ದ ಬಗ್ಗೆ ಹದಿನೈದು ಗ್ರಂಥಗಳನ್ನು ಬರೆದಿದ್ದಾರೆ. ಆದರೆ ಅವರು ಮನದಾಳದ ಭಾವನೆಯನ್ನು ಪ್ರಕಟಿಸುವಾಗ 'ತ್ರಿ ಏಕತ್ವ'ದ ಬದಲು ಏಕದೇವತ್ವದ ಬಗ್ಗೆ ಮಾತಾಡುತ್ತಾರೆ. ಅದರಿಂದಲೇ ಆತ್ಮಕ್ಕೆ ಉನ್ನತಿ ಪ್ರಾಪ್ತವಾಗುತ್ತದೆ. ಎಲ್ಲ ಪದಗಳು ಮತ್ತು ಸಂಕೇತಗಳು ಮೇಲೆ ಹಾರಿ ಹೋಗುತ್ತವೆ ಎನ್ನುತ್ತಾರೆ. (The Communion of the Christian with God)

ಇಂತಹ ಅನುಭವಗಳನ್ನು ಮಾಡುವವರ ಆಧ್ಯಾತ್ಮಿಕ ದರ್ಶನಗಳಲ್ಲಿ ಭಾವನೆಗಳ ಪ್ರಕಟನೆ ಕೇವಲ ಸಾಪೇಕ್ಷ ಮತ್ತು ಸಾಂಕೇತಿಕ (Relative and Symbolic) ಆಗಿರುವುದು.

ದೇವರ ಕುರಿತು ನಮ್ಮ ಕಲ್ಪನೆಗಳು ಕಥೆಗಳಂತಿವೆ. ಆ ಪೈಕಿ ಯಾವ ಕಥೆಯೂ ಪೂರ್ಣವಾಗಲೀ ಅಂತಿಮವಾಗಲೀ ಆಗಿರುವುದಿಲ್ಲ. ನಮ್ಮ ಸ್ಥಿತಿಯು ಸಮುದ್ರದ ದಂಡೆಗಳಲ್ಲಿ ತಮ್ಮ ಪಾತ್ರೆಗಳಲ್ಲಿ ಸಮುದ್ರದ ನೀರನ್ನು ತುಂಬಿಸಲು ಪ್ರಯತ್ನಿಸುವ ಮಕ್ಕಳಂತಿದೆ. ನಾವು ಆ ಸಮುದ್ರದ ಎಲ್ಲ ನೀರನ್ನು ನಮ್ಮ ಪಾತ್ರೆಗಳಲ್ಲಿ ತುಂಬಿಸಲು ಸಾಧ್ಯವಿಲ್ಲ. ಆದರೆ ನಮ್ಮ ಪಾತ್ರೆಗಳಲ್ಲಿ ಬರುವ ಸಮುದ್ರದ ಪ್ರತಿಯೊಂದು ತೊಟ್ಟು ನೀರು ಆ ಸಮುದ್ರದ ಅಂಶವೇ ಆಗಿರುತ್ತದೆ.

ಇದನ್ನು ಇನ್ನೊಂದು ರೀತಿಯಲ್ಲೂ ಗ್ರಹಿಸಬಹುದು. ಒಂದು ಕಾಡಿನಲ್ಲಿ ಹಕ್ಕಿಗಳಿವೆ. ಅವುಗಳ ಪೈಕಿ ಪ್ರತಿಯೊಂದೂ ತನ್ನದೇ ಆದ ರೀತಿಯಲ್ಲಿ ದೇವನಲ್ಲಿ ಪ್ರಾರ್ಥಿಸುತ್ತದೆ. ಅವುಗಳ ರಾಗ ಮತ್ತು ರೀತಿ ಭಿನ್ನವಾಗಿರುತ್ತದೆ. ಆದರೆ ಅವುಗಳ ಪ್ರಾರ್ಥನೆ ಮಾತ್ರ ದೇವರ ಸನ್ನಿಧಾನದಲ್ಲೇ ಆಗಿರುತ್ತದೆ.

ಮದಿರೆಯ ಪಾತ್ರೆಗಳು ವಿಭಿನ್ನ ರೂಪ-ವಿನ್ಯಾಸಗಳದ್ದಿರಬಹುದು. ಆದರೆ ಅವುಗಳ ಸಾಮರ್ಥ್ಯ ಒಂದೇ ಆಗಿರುತ್ತದೆ. ಇದೇ ಕಲ್ಪನೆ ಮತ್ತು ಭಾವನೆಯೊಂದಿಗೆ ಭಾರತದಲ್ಲಿ ಆರ್ಯರು ಮತ್ತು ಅನಾರ್ಯರ ಎಲ್ಲ ದೇವತೆಗಳನ್ನು ಸ್ವೀಕರಿಸಲಾಯಿತು. ಇವುಗಳಲ್ಲೆಲ್ಲಾ ಒಂದೇ ಸತ್ಯವಿದೆ ಎಂದೂ ಇವುಗಳೆಲ್ಲ ಸೇರಿ ಒಂದೇ ದೇವರ ಕಡೆಗೆ ನಮ್ಮನ್ನು ಒಯ್ಯುತ್ತವೆಂದೂ ಹೇಳಲಾಯಿತು. ಒಬ್ಬ ವಿಷ್ಣು ಭಕ್ತನಿದ್ದನಂತೆ- ಅವನಲ್ಲಿ ಶಿವ ಭಕ್ತರ ಕುರಿತು ದ್ವೇಷ ಭಾವನೆ ಬೆಳೆಯಿತು. ಆಗ ಅವನು ವಿಷ್ಣುವಿನ ಮೂರ್ತಿಯ ಮುಂದೆ ಬಾಗಿದಾಗ ಆ ಮೂರ್ತಿ ಇಬ್ಭಾಗವಾಯಿತು. ಒಂದು ಭಾಗದಲ್ಲಿ ವಿಷ್ಣು ಮತ್ತು ಇನ್ನೊಂದು ಭಾಗದಲ್ಲಿ ಶಿವ ಪ್ರತ್ಯಕ್ಷನಾದ. ಇಬ್ಬರೂ ಒಂದೇ ಆಗಿರುವಂತೆ ಮುಗುಳ್ನಕ್ಕರು. "ವಿಷ್ಣು ಮತ್ತು ಶಿವ ವಾಸ್ತವದಲ್ಲಿ ಒಂದೇ ಆಗಿದೆ" ಎಂದು ಆತನಿಗೆ ಹೇಳಿದರು.

ದೇವಲೋಕದ ತಂದೆಯನ್ನು ಕರೆಯುವುದು, ಅಥವಾ ಬಲಿ ನೀಡುವ ಮೂಲಕ ಅನೇಕ ಉನ್ನತ ಮತ್ತು ಪ್ರಕಾಶಮಾನ ಅಸ್ತಿತ್ವಗಳ ಕಡೆಗೆ ಗಮನ ಹರಿಸುವುದು, ಅವರಿಂದ ಜೀವನಾಧಾರಕ್ಕಾಗಿ ಪ್ರಾರ್ಥಿಸುವುದು ಆರ್ಯರ ಆರಂಭಿಕ ಉಪಾಸನೆಯಾಗಿತ್ತು. ಆದರೆ ಕೆಲವೇ ಸಮಯದ ನಂತರ ಬಲಿದಾನದ ಸ್ಥಾನವನ್ನು ಪೂಜೆ-ಪುರಸ್ಕಾರಗಳು ಆಕ್ರಮಿಸಿದುವು. ಮೂರ್ತಿ ಪೂಜೆಯು ದ್ರಾವಿಡ ಜನಾಂಗದಲ್ಲಿ ಒಂದು ಪ್ರಭಾವಶಾಲಿ ಸಂಕೇತವಾಗಿತ್ತು. ಅದನ್ನು ಆರ್ಯರು ಅಳವಡಿಸಿಕೊಂಡರು.

ಒಬ್ಬ ಶಿಷ್ಯ ಗುರುವಿನ ಬಳಿ ವಿದ್ಯಾಭ್ಯಾಸಕ್ಕಾಗಿ ಬಂದಾಗ ಅವನಲ್ಲಿ ಅವನ ದೇವತೆಯ ಕುರಿತು ಗುರು ಪ್ರಶ್ನಿಸುತ್ತಿದ್ದನು. ಏಕೆಂದರೆ ಪ್ರತಿಯೊಬ್ಬನಿಗೂ ಆಯ್ಕೆಯ ಸ್ವಾತಂತ್ರ್ಯವಿತ್ತು. ಅದರ ಉಪಾಸನೆಗೆ ಯಾವ ವಿಧಾನವು ಅವನಿಗೆ ಹೆಚ್ಚು ಇಷ್ಟವಾಗಿತ್ತೋ ಅದನ್ನೇ ಅಳವಡಿಸುವ ಸ್ವಾತಂತ್ರ್ಯವಿತ್ತು. ಅವನ ಕಲ್ಪನೆಯು ಒಂದು ನಿರಾಕಾರ ವಸ್ತುವಿನ ಸಾಕಾರ ದರ್ಶನವೇ ಆಗಿತ್ತು. ಅದು ಅವನನ್ನು ಹಂತಹಂತವಾಗಿ ಒಂದು ಸಮಗ್ರ ವಾಸ್ತವಿಕತೆಯೆಡೆಗೆ ಒಯ್ಯುವುದು. ತನ್ನ ವಿದ್ಯಾಲಯದ ಹೊರತು ಇತರ ವಿದ್ಯಾಲಯಗಳನ್ನು ಅಂಗೀಕರಿಸದಿರಲು ಯಾವ ವಿದ್ಯಾರ್ಥಿಗೂ ಹಕ್ಕಿಲ್ಲ. ಏಕೆಂದರೆ ಎಲ್ಲ ವಿದ್ಯಾಲಯಗಳ ಸ್ಥಾಪನೆಯ ಉದ್ದೇಶವೂ ಶಿಕ್ಷಣವಾಗಿದೆ. ಅದು ಒಂದು ಸಮಾನ ಮೌಲ್ಯವಾಗಿದೆ.

ಅಶೋಕನು ಎಲ್ಲ ಧರ್ಮಗಳೂ ಸಮಾನವೆಂಬ ಸಿದ್ಧಾಂತದವನಾಗಿದ್ದನೆಂದು ಹೇಳಲಾಗುತ್ತದೆ. ಅವನ ಶಿಲಾ ಲೇಖನಗಳಿಂದ ಆತ ಧರ್ಮದ ವಿಭಿನ್ನ ರೂಪಗಳನ್ನು ಗೌರವದ ದೃಷ್ಟಿಯಿಂದ ಕಾಣುತ್ತಿದ್ದನೆಂದು ತಿಳಿಯುತ್ತದೆ. ಆತ ಧರ್ಮದ ನೈಜ ಆತ್ಮಕ್ಕೆ ಅತ್ಯಧಿಕ ಮಹತ್ವ ನೀಡುತ್ತಿದ್ದರೂ ತನ್ನ ಧರ್ಮವನ್ನು ಗೌರವಿಸುವುದರ ಜತೆಗೆ ಇತರ ಧರ್ಮಗಳನ್ನೂ ತೆಗಳುತ್ತಿರಲಿಲ್ಲ. ಇತರರ ಧರ್ಮವನ್ನು ತೆಗಳುವವನು ಸ್ವತಃ ತನ್ನ ಧರ್ಮಕ್ಕೇ ಚ್ಯುತಿ ಮಾಡುತ್ತಾನೆಂಬುದು ಆತನ ನಿಲುವಾಗಿತ್ತು.

ಡಾ|| ಎಸ್. ರಾಧಾಕೃಷ್ಣನ್‌ರ ಪ್ರಕಾರ ಶಾಂತಿ ಸ್ಥಾಪನೆ ಮತ್ತು ಪರಸ್ಪರ ಸಹಬಾಳ್ವೆಗೆ ಈ ಸಿದ್ಧಾಂತವು ಬಹಳ ಅಗತ್ಯವಾಗಿದೆ. ಮಾನವಕುಲದ ದೀರ್ಘಾಯುಷ್ಯಕ್ಕೆ ಅವರು ಪರಸ್ಪರ ಸಹಕರಿಸುವುದು ಮತ್ತು ಒಬ್ಬರ ಸ್ವಾತಂತ್ರ್ಯವು ಇನ್ನೊಬ್ಬರ ಸ್ವಾತಂತ್ರ್ಯದಲ್ಲಿ ಹಸ್ತಕ್ಷೇಪ ನಡೆಸದಿರುವುದು ಅಗತ್ಯವಾಗಿದೆ. ಇದೇ ರೀತಿ ಧರ್ಮದ ವಿಷಯದಲ್ಲಿ ಸಹಿಷ್ಣುತೆ ಅಗತ್ಯವಾಗಿದೆ. ಧರ್ಮಗಳು ಒಂದನ್ನೊಂದು ಅಂಗೀಕರಿಸದೆ ಇದ್ದರೆ ಅವುಗಳಿಗೆ ಯಾವ ಭವಿಷ್ಯವೂ ಇಲ್ಲ. ಇದು ಕಾಲದ ಕರೆ ಮತ್ತು ಸಮಯದ ಬೇಡಿಕೆಯಾಗಿದೆ. ಪ್ರತಿಯೊಂದು ದೊಡ್ಡ ಧರ್ಮವು ಮನುಷ್ಯ ಚಾರಿತ್ರ್ಯವನ್ನು ಉನ್ನತಗೊಳಿಸಿದೆ. ಒಂದು ನಿರ್ದಿಷ್ಟ ಧರ್ಮ ಮಾತ್ರ ಚಾರಿತ್ರ್ಯವಂತ ವ್ಯಕ್ತಿಗಳನ್ನು ಸೃಷ್ಟಿಸಿದೆ ಎನ್ನುವುದು ಸರಿಯಲ್ಲ.

ಸರ್ವಧರ್ಮ ಸಮಭಾವದ ಪ್ರತಿಪಾದಕರು ತಮ್ಮ ಸಿದ್ಧಾಂತದ ಬೆಂಬಲಕ್ಕಾಗಿ ವೇದ, ಗೀತೆ ಹಾಗೂ ವಿಭಿನ್ನ ಧಾರ್ಮಿಕ ವ್ಯಕ್ತಿಗಳನ್ನೂ ಮುಂದಿಡುತ್ತಾರೆ. ಅವರು ಅಥರ್ವ ವೇದದ ಈ ಶ್ಲೋಕವನ್ನು ಪಠಿಸುತ್ತಾರೆ-

"ಒಂದೇ ಜ್ಯೋತಿಯಿದೆ. ಅದು ಹಲವು ವಿಭಿನ್ನ ರೂಪಗಳಲ್ಲಿ ಪ್ರಕಟವಾಗುತ್ತದೆ."

ಭಗವದ್ಗೀತೆಯ ಈ ಶ್ಲೋಕವು ಅದನ್ನು ಬೆಂಬಲಿಸುತ್ತದೆ-

"ಚೆನ್ನಾಗಿ ಪಾಲಿಸಲ್ಪಡುವ ಪರಧರ್ಮಕ್ಕಿಂತ ಗುಣಗಳಿಂದ ವಿರಹಿತವಾದ
ಸ್ವಧರ್ಮ ಮೇಲು. ಏಕೆಂದರೆ ಪ್ರಕೃತಿದತ್ತವಾಗಿ ನಿಶ್ಚಯಿಸಲ್ಪಟ್ಟ ಸ್ವಧರ್ಮವನ್ನು
ಪಾಲಿಸುತ್ತಿದ್ದರೆ ವ್ಯಕ್ತಿಯು ಪಾಪಿಯಾಗಲಾರನು."

ಲೋಕದಲ್ಲಿ ವಿಭಿನ್ನ ಜನಾಂಗಗಳಿವೆ. ಅವರ ಧರ್ಮಗಳೂ ಭಿನ್ನಭಿನ್ನವಾಗಿವೆ. ಈ ವಿವಿಧತೆಯಲ್ಲಿ ಏಕತೆಯನ್ನು ಸ್ಥಾಪಿಸಲಿಕ್ಕಾಗಿ 'ಸರ್ವಧರ್ಮ ಸಮಭಾವ'ದ ಸಿದ್ಧಾಂತವು ಯಶಸ್ವೀ ಸೂತ್ರವಾಗಿದೆ ಎಂದು ಸಾರಲಾಗುತ್ತದೆ. ಈ ನಿಟ್ಟಿನಲ್ಲಿ ಮೊಘಲ್ ಚಕ್ರವರ್ತಿಯಾದ ಅಕ್‌ಬರನ 'ದೀನೆ ಇಲಾಹಿ'ಗೂ ಸಾಕಷ್ಟು ಮಹತ್ವ ನೀಡಲಾಗುತ್ತದೆ. 'ದಾರಾಶಕೂ'ನ ಪ್ರಯತ್ನಗಳನ್ನು ಇದೇ ದೃಷ್ಟಿಯಿಂದ ನೋಡಲಾಗುತ್ತದೆ. ಆತನೂ 'ಸರ್ವಧರ್ಮ ಸಮಭಾವ'ದ ಸಿದ್ಧಾಂತವನ್ನು ಬೆಳೆಸುವಲ್ಲಿ ಮಹತ್ವದ ಪಾತ್ರ ವಹಿಸಿರುವನೆಂದು ಪರಿಗಣಿಸಲಾಗುತ್ತದೆ. 'ದಾರಾಶಕೂ' ಉಪನಿಷತ್ತು, ಭಗವದ್ಗೀತೆ, ಯೋಗ ವಿಶಿಷ್ಟ, ಪ್ರಬೋಧ, ಚಂದ್ರವಧೆ ಇತ್ಯಾದಿ ಸಂಸ್ಕೃತ ಗ್ರಂಥಗಳನ್ನು ಫಾರ್ಸಿ ಭಾಷೆಗೆ ಅನುವಾದಿಸಿದ್ದನು. ಅಲ್ಲದೆ ಆತ ಹಲವು ಸ್ವತಂತ್ರ ಕೃತಿಗಳನ್ನೂ ರಚಿಸಿದ್ದನು. ಅವನ ಒಂದು ಪ್ರಸಿದ್ಧ ಗ್ರಂಥ 'ಸಂಪ್ರದಾಯೋಂಕಾ ತುಲನಾತ್ಮಕ್ ಅಧ್ಯಯನ್' ಆಗಿದೆ. 'ದಾರಾಶಕೂ'ನ ಕುರಿತು ಅವನ ಗುರು ಮಲಾಷಾ ಹೀಗೆ ಹೇಳಿರುವನು:

"ನೀನು ಲೋಕದ ಎಲ್ಲ ಧರ್ಮಗಳ ಐಕ್ಯಕ್ಕಾಗಿ ಜನ್ಮ ತಾಳಿರುವೆ.
ಆದ್ದರಿಂದ ನೀನು ಅದಕ್ಕಾಗಿ ನಿನ್ನ ಜೀವನವನ್ನು ಮುಡಿಪಾಗಿಡಬೇಕು."

ಹಿಂದೂ ಮತ್ತು ಇಸ್ಲಾಮ್ ಧರ್ಮಗಳ ತುಲನಾತ್ಮಕ ಅಧ್ಯಯನಕ್ಕಾಗಿ 'ಮಜ್‌ಮಉಲ್ ಬಹ್ರೈನ್' ಎಂಬ ಫಾರ್ಸಿ ಗ್ರಂಥವನ್ನೂ 'ದಾರಾಶಕೂ' ರಚಿಸಿದ್ದ. ಅದನ್ನು ಸಂಸ್ಕೃತಕ್ಕೆ ಅನುವಾದಿಸಿ 'ಸಮುದ್ರ ಸಂಗಮ' ಎಂದು ಹೆಸರಿಟ್ಟ. ಹಿಂದೂ ಮುಸ್ಲಿಮ್ ಸಂಸ್ಕೃತಿಯ ವಿಷಯದಲ್ಲಿ 'ದಾರಾಶಕೂ' ಬರೆದ ಗ್ರಂಥದಲ್ಲಿ ಹದಿನಾರು ವಿಷಯಗಳ ಮೇಲೆ ಬೆಳಕು ಚೆಲ್ಲಲಾಗಿದೆ. "ನಾನು ಬಾಬಾ ಲಾಲರ ಜತೆ ಹಿಂದೂ ಮುಸ್ಲಿಮ್ ಧರ್ಮಗಳ ಬಗ್ಗೆ ಅನೇಕ ಸಲ ಚರ್ಚಿಸಿದ್ದೇನೆ. ಕೇವಲ ಪಾರಿಭಾಷಿಕಗಳ ವ್ಯತ್ಯಾಸವಲ್ಲದೆ ಅವುಗಳ ಮಧ್ಯೆ ನೈಜ ವ್ಯತ್ಯಾಸವೇನೂ ಇಲ್ಲ. ವಿದ್ವಾಂಸರ ಅಭಿಪ್ರಾಯದಂತೆ ಸತ್ಯದ ಶೋಧನೆಯೇ ಎಲ್ಲ ಧರ್ಮಗಳ ಧ್ಯೇಯವಾಗಿದೆ. ಸತ್ಯವು ಸುಲಭದ ವಿಷಯವೇನಲ್ಲ. ಅದು ಜ್ಞಾನಿಗಳ ಅನುಭವಗಳೇ ಆಗಿದೆ. ಅಲ್ಪಮತಿಗಳು ಧರ್ಮದ ಆಳವನ್ನು ಅರಿಯಲಾರರು. ನನ್ನ ಪ್ರಯತ್ನವು ಜ್ಞಾನಾರ್ಥಿಗಳಿಗಾಗಿದೆ" ಎಂದು ಅದರಲ್ಲಿ ಆತ ಬರೆದಿರುವನು.

ಬ್ರಹ್ಮ ಸಮಾಜದ ಸ್ಥಾಪಕರಾದ ರಾಜಾರಾಮ್ ಮೋಹನ್ ರಾಯ್‌ಯವರು "ಸರ್ವಧರ್ಮ ಸಮಭಾವ"ದ ಪ್ರತಿಪಾದಕರಾಗಿದ್ದರು. 1866ರಲ್ಲಿ ದೇವೇಂದ್ರರು ಒಂದು ಪ್ರತ್ಯೇಕ ಸಮಾಜವನ್ನು ರಚಿಸಿದರು. ಅದನ್ನು 'ಭಾರತೀಯ ಬ್ರಹ್ಮ ಸಮಾಜ'ವೆಂದು ಕರೆಯಲಾಯಿತು. ಹಿಂದೂ, ಬೌದ್ಧ ಮತ್ತು ಇಸ್ಲಾಮ್ ಧರ್ಮದ ಗ್ರಂಥಗಳಿಂದ ಉದ್ಧರಣೆಗಳನ್ನು ಆಯ್ಕೆ ಮಾಡಿ ಅದನ್ನು ಒಂದು ಗ್ರಂಥದ ರೂಪದಲ್ಲಿ ಪ್ರಕಟಿಸಲಾಯಿತು. 'ಸರ್ವಧರ್ಮ ಸಮಭಾವ'ದ ಪ್ರತಿಪಾದಕರಲ್ಲಿ ರಾಮಕೃಷ್ಣ ಪರಮಹಂಸರೂ ಸೇರಿದ್ದಾರೆ. ಅವರು ಗ್ರಂಥಗಳನ್ನಾಗಲೀ ಶಾಸ್ತ್ರಗಳನ್ನಾಗಲೀ ನಿರಾಕರಿಸಲಿಲ್ಲ. ಯಾವ ಪಂಥವನ್ನೂ ಅವರು ವಿರೋಧಿಸಿಲ್ಲ. ರಾಮಕೃಷ್ಣ ಪರಮಹಂಸರಿಂದಾಗಿ ಪುರಾತನ ವಿಚಾರಧಾರೆ ಮತ್ತು ಪುರಾತನ ಸಂಪ್ರದಾಯದವರಿಗೆ ಒಂದು ದೊಡ್ಡ ಆಸರೆ ದೊರೆತಂತಾಯಿತು.

ಪರಮಹಂಸರ ಶಿಷ್ಯರಾದ ಸ್ವಾಮಿ ವಿವೇಕಾನಂದರು ವೇದಾಂತಕ್ಕೆ ಮಹತ್ವ ನೀಡಿದರು. ಏಕೆಂದರೆ ಈ 'ದರ್ಶನ'(ತತ್ವಶಾಸ್ತ್ರ)ವು ವಿಶಿಷ್ಟವನ್ನೂ ಸಾಮಾನ್ಯದ ಮೂಲಕ ತಿಳಿಸುವ ಪ್ರಯತ್ನವಾಗಿದೆ. ಅದು ಐಕ್ಯ ಮತ್ತು ಸಾಮರಸ್ಯಕ್ಕೆ ಒತ್ತು ನೀಡುತ್ತದೆ. ವ್ಯಕ್ತಿಗಳ ಬದಲು ಶಾಶ್ವತ ತತ್ವಗಳ ಮೇಲೆ ಅದು ನೆಲೆ ನಿಂತಿದೆ. ಅದು ಭೇದದಲ್ಲಿ ಅಭೇದವಾಗಿದೆ. ಅದರ ಪ್ರಕಾರ ಗೋಚರವಾಗುವ ವಿಭಿನ್ನ ರೂಪಗಳ ಹಿಂದೆ ಇರುವುದು ಕೇವಲ ಒಂದೇ ಅಸ್ತಿತ್ವವಾಗಿದೆ.

ಗಾಂಧೀಜಿ ನಮ್ಮ ಕಾಲದ ವಿಶಿಷ್ಟ ವ್ಯಕ್ತಿ ಆಗಿದ್ದರು. ಅವರೂ 'ಸರ್ವಧರ್ಮ ಸಮಭಾವ'ದ ವಕ್ತಾರರಾಗಿದ್ದರು. ತನ್ನ ಧರ್ಮವೇ ಶ್ರೇಷ್ಠ. ಆದ್ದರಿಂದ ಎಲ್ಲರೂ ಅದನ್ನು ಅಂಗೀಕರಿಸಬೇಕು ಎಂದು ಹೇಳುವುದು ಯಾರ ಪಾಲಿಗೂ ಸರಿಯಲ್ಲವೆಂಬುದು ಅವರ ಅಭಿಪ್ರಾಯ. ತಮ್ಮ ಸಿದ್ಧಾಂತವನ್ನು ಅವರು ಈ ರೀತಿ ಸಮರ್ಥಿಸುತ್ತಾರೆ: "ನಾವು ದೇವರನ್ನು ನೋಡಲಾರೆವು. ಅಂತೆಯೇ ನಾವು ಪರಿಪೂರ್ಣ ಧರ್ಮವನ್ನೂ ನೋಡಲಾರೆವು. ನಮ್ಮ ಕಲ್ಪನೆಯ ಯಾವ ಧರ್ಮವೂ ಪರಿಪೂರ್ಣವಾಗಿರಲಾರದು. ಅದರಲ್ಲಿ ಕುಂದುಕೊರತೆ ಇದ್ದೇ ಇರುತ್ತದೆ. ಈ ರಹಸ್ಯವನ್ನು ಅರಿತವನು ತನ್ನ ಧರ್ಮದ ಕುಂದುಕೊರತೆಯನ್ನೂ ಅಂಗೀಕರಿಸುತ್ತಾನೆ." ಗಾಂಧೀಜಿಯವರ ಸಿದ್ಧಾಂತದ ಪ್ರಕಾರ ವ್ಯಕ್ತಿಯು ತನ್ನ ಧರ್ಮವನ್ನು ಎಲ್ಲ ಧರ್ಮಗಳಿಗಿಂತ ಶ್ರೇಷ್ಠವೆಂದು ಹೇಳಬಾರದು. ಆದರೆ ಅದನ್ನು ತೊರೆಯಲೂ ಬಾರದು. ಜತೆಗೆ ತನ್ನ ಧರ್ಮದ ಕೊರತೆಗಳ ಬಗ್ಗೆ ಕಣ್ಣು ಮುಚ್ಚಿಕೊಳ್ಳಲೂಬಾರದು.

❑

ಹಿಂದೂ ಧರ್ಮ

ವಿಭಿನ್ನ ಧರ್ಮಗಳ ಮಧ್ಯೆ ಇರುವ ಮೂಲಭೂತ ವ್ಯತ್ಯಾಸವನ್ನು ಅರಿಯಲು ಪ್ರಪ್ರಥಮವಾಗಿ ನಾವು ಹಿಂದೂ ಧರ್ಮದ ಮೂಲಭೂತ ವಿಶ್ವಾಸ ಮತ್ತು ಸಿದ್ಧಾಂತಗಳ ಬಗ್ಗೆ ಒಮ್ಮೆ ಅವಲೋಕಿಸೋಣ.

ಹಿಂದೂ ಧರ್ಮದ ಮೂಲವು ಯಾವುದೇ ಒಂದು ಗ್ರಂಥವಾಗಿರದೆ ವೇದ, ಉಪನಿಷತ್ತು, ಪುರಾಣ, ಸ್ಮೃತಿಗಳು, ರಾಮಾಯಣ, ಭಗವದ್ಗೀತೆ ಇತ್ಯಾದಿ ಅನೇಕ ಗ್ರಂಥಗಳಾಗಿವೆ. ಇದರ ಜತೆಗೆ ಹಿಂದೂ ಧರ್ಮದ ಆಚಾರ-ಸಂಪ್ರದಾಯಗಳು ಕೂಡಾ ಅದರ ಒಂದು ಮೂಲವೆಂದೇ ಪರಿಗಣಿಸಲ್ಪಡುತ್ತದೆ. ಈ ಮೂಲಗಳ ಅಧ್ಯಯನದಿಂದ ಹಿಂದೂ ಧರ್ಮದ ಮೂಲಭೂತ ವಿಶ್ವಾಸ-ಶ್ರದ್ಧೆ ಮತ್ತು ಸಿದ್ಧಾಂತಗಳನ್ನು ನಾಲ್ಕು ಭಾಗಗಳಾಗಿ ವಿಂಗಡಿಸಬಹುದು:

1. ಬಹುದೇವ ಕಲ್ಪನೆ, ಮೂರ್ತಿಪೂಜೆ ಮತ್ತು ಅದ್ವೈತವಾದ
2. ಅವತಾರದ ಕಲ್ಪನೆ
3. ಪುನರ್ಜನ್ಮ ಸಿದ್ಧಾಂತ
4. ವರ್ಣಾಶ್ರಮ ಪದ್ಧತಿ

1. ಬಹುದೇವ ಕಲ್ಪನೆ, ಮೂರ್ತಿಪೂಜೆ ಮತ್ತು ಅದ್ವೈತವಾದ

ಹಿಂದೂ ಧರ್ಮವನ್ನು ಬಹುದೇವ ಕಲ್ಪನೆ ಮತ್ತು ಮೂರ್ತಿಪೂಜೆಯ ಧರ್ಮವೆಂದೇ ಹೇಳಬಹುದು. ಅದ್ವೈತವಾದವು ಅದನ್ನು ಇನ್ನಷ್ಟು ಪುಷ್ಟೀಕರಿಸುತ್ತದೆ. ಋಗ್ವೇದದಲ್ಲಿ "ಏಕಮ್ ಸತ್ ವಿಪ್ರಾಃ ಬಹುದಾ ವದಂತಿ" (ಸತ್ಯವು ಒಂದೇ ಆಗಿದ್ದು ಜನರು ಅದನ್ನು ವಿಭಿನ್ನ ಹೆಸರಿನಿಂದ ಕರೆಯುತ್ತಾರೆ) ಎಂದು ಹೇಳಲಾಗಿದೆ. ಆದರೆ ಅದೇ ಋಗ್ವೇದದಲ್ಲಿ ದೇವತೆಗಳ ಸಂಖ್ಯೆ ಮೂವತ್ತಮೂರು ಎಂದು ಹೇಳಲಾಗಿದೆ. ಮುಂದೆ ಈ ಸಂಖ್ಯೆಯು ಬೆಳೆದು ಮೂವತ್ತಮೂರು ಕೋಟಿಯಾಗುತ್ತದೆ. ಇದರ ಜತೆಗೆ ಹಿಂದೂಗಳ ಕ್ರಿಯಾತ್ಮಕ ಸಾಕ್ಷ್ಯವನ್ನು ಪರಿಗಣಿಸುವುದಾದರೆ ಈ ಸಂಖ್ಯೆಯು ಇನ್ನಷ್ಟು ಹೆಚ್ಚುತ್ತದೆ. ಅಸಂಖ್ಯ ದೇವಿ-ದೇವತೆಗಳ

ಹೊರತು ವಿಶ್ವದ ಪ್ರತಿಯೊಂದು ಜಡ ಮತ್ತು ಚೇತನ ವಸ್ತು ಕೂಡ ಹಿಂದೂಗಳ ಶ್ರದ್ಧಾ-ಭಕ್ತಿಗಳ ಕೇಂದ್ರವಾಗಿದೆ. ಸೂರ್ಯ, ಚಂದ್ರ, ನಕ್ಷತ್ರ, ಸಮುದ್ರ, ನದಿ, ಪರ್ವತ, ವೃಕ್ಷ, ಗೋವು, ಸರ್ಪವೇ ಮುಂತಾದ ಎಲ್ಲ ವಸ್ತುಗಳೂ ಪೂಜ್ಯವೆಂದು ಪರಿಗಣಿಸಲ್ಪಡುತ್ತವೆ.

ಅದ್ವೈತವಾದದ ಸಿದ್ಧಾಂತದ ಪ್ರಕಾರ ವಿಶ್ವವು ಒಂದು ಮಾಯೆಯಾಗಿದೆ. ದೇವರ ಹೊರತು ಯಾವ ವಸ್ತುವಿಗೂ ನೈಜ ಅಸ್ತಿತ್ವವಿಲ್ಲ. ದೇವನು ಅಪಾರ ಅಸ್ತಿತ್ವವಾಗಿದ್ದಾನೆ. ವಿಭಿನ್ನ ಜಡ-ಚೇತನಗಳು ಅದು ದೇವನ ಪ್ರತಿರೂಪಗಳಾಗಿವೆ. ಬಾಹ್ಯದಲ್ಲಿ ಕಾಣುತ್ತಿರುವುದೆಲ್ಲವೂ ಮಾಯೆಯಾಗಿದ್ದು ವಾಸ್ತವದಲ್ಲಿ ಎಲ್ಲ ವಸ್ತುಗಳೂ ದೇವರಾಗಿವೆ. ದೇವನು ಪ್ರತಿಯೊಂದು ವಸ್ತುವಿನಲ್ಲೂ ಇರುವ ಸರ್ವಾಂತರ್ಯಾಮಿಯಾಗಿದ್ದಾನೆ. ಈ ರೀತಿ ಕಣಕಣದಲ್ಲೂ ದೇವನಿದ್ದಾನೆಂಬುದು ಉಪನಿಷತ್ತುಗಳ ಸಿದ್ಧಾಂತವಾಗಿದೆ.

ಹಿಂದೂ ಧರ್ಮದಲ್ಲಿ ಏಕದೇವವಾದ ಮತ್ತು ಬಹುದೇವ ಕಲ್ಪನೆಗೆ ಮಾತ್ರವಲ್ಲ ನಾಸ್ತಿಕತೆಗೂ ಅವಕಾಶವಿದೆ. ಜೈನ ಧರ್ಮ ಮತ್ತು ಬೌದ್ಧ ಧರ್ಮಗಳೂ ಹಿಂದೂ ಧರ್ಮದಲ್ಲಿ ಸೇರಿವೆ ಎಂದು ವಾದಿಸಲಾಗುತ್ತದೆ. ಜೈನ ಧರ್ಮವು ದೇವರ ಅಸ್ತಿತ್ವವನ್ನೇ ನಿರಾಕರಿಸುತ್ತದೆ. ಬೌದ್ಧ ಧರ್ಮದಲ್ಲಿ ದೇವರ ಕಲ್ಪನೆಯೇ ಇಲ್ಲ.

2. ಅವತಾರದ ಕಲ್ಪನೆ

ಅವತಾರ ವಾದವು ಹಿಂದೂ ಧರ್ಮದ ಇನ್ನೊಂದು ಮುಖ್ಯ ಕಲ್ಪನೆಯಾಗಿದೆ. ಎಲ್ಲ ಕಾಲಗಳಲ್ಲಿಯೂ ಸತ್ಯದ ಉತ್ಥಾನ ಮತ್ತು ಮಿಥ್ಯೆಯ ವಿನಾಶಕ್ಕಾಗಿ, ಶಿಷ್ಟರ ರಕ್ಷಣೆ ಮತ್ತು ದುಷ್ಟರ ಸಂಹಾರಕ್ಕಾಗಿ ದೇವರು ಬೇರೆ ಬೇರೆ ರೂಪ ಧರಿಸಿ ಈ ಲೋಕಕ್ಕೆ ಬರುತ್ತಿರುತ್ತಾನೆ ಎಂಬುದೇ ಅದರ ತಾತ್ಪರ್ಯ. ಶ್ರೀ ಕೃಷ್ಣನ ಅವತಾರದ ಕಲ್ಪನೆಯು ಅದಕ್ಕೆ ಒಂದು ಸ್ಪಷ್ಟವಾದ ಉದಾಹರಣೆಯಾಗಿದೆ. ಅವನು ಸುಪ್ರಸಿದ್ಧ ಮಹಾಭಾರತ ಯುದ್ಧದ ವೇಳೆ ಮನುಷ್ಯರೂಪ ಧಾರಣೆ ಮಾಡಿ ಅವತರಿಸಿ ಅರ್ಜುನನನ್ನು ಯುದ್ಧಕ್ಕೆ ಪ್ರೇರೇಪಿಸಿದ್ದನು. "ಧರ್ಮಕ್ಕೆ ಚ್ಯುತಿಯಾಗಿ ಅಧರ್ಮವು ವ್ಯಾಪಿಸಿದಾಗಲೆಲ್ಲಾ ನಾನು ಅವತಾರ ತಾಳುತ್ತೇನೆ, ಭಕ್ತರನ್ನು ರಕ್ಷಿಸುತ್ತೇನೆ, ಪಾಪಿಗಳನ್ನು ಸಂಹರಿಸುತ್ತೇನೆ" ಎಂದು ಸ್ವಯಂ ಶ್ರೀಕೃಷ್ಣನೇ ಹೇಳಿರುವನು.

ಅವತಾರಗಳಲ್ಲಿ ಶ್ರೀಕೃಷ್ಣನಿಗಿಂತ ಉನ್ನತ ಸ್ಥಾನ ರಾಮನಿಗಿದೆ. ರಾಮನ ಕಾಲವು ಕೃಷ್ಣನಿಗಿಂತ ಹಿಂದಿನದ್ದಾಗಿದೆ. ಆದ್ದರಿಂದ ಹಿಂದೂ ಧರ್ಮದಲ್ಲಿ ಅವನ ಸ್ಥಾನಮಾನವು ಇತರೆಲ್ಲ ಅವತಾರಗಳಿಗಿಂತ ಉನ್ನತವಾಗಿದೆ. ತುಳಸೀದಾಸರ ರಾಮಾಯಣದಲ್ಲಿ ಶ್ರೀರಾಮನನ್ನು ಸ್ಪಷ್ಟವಾಗಿ ದೇವನ ಅವತಾರ ಎಂದು ಸಾರಲಾಗಿದೆ. ವಾಲ್ಮೀಕಿ ರಾಮಾಯಣದಲ್ಲೂ ಅವನಿಗೆ ಅದೇ ಸ್ಥಾನವನ್ನು ಕಲ್ಪಿಸಲಾಗಿದೆ.

ದೇವರ ಈ ಅವತಾರಗಳು ಒಂದೆರಡಲ್ಲ, ಅಸಂಖ್ಯ ಇವೆ. ಇತರ ಕೆಲವು ವಿಷಯಗಳ ಜತೆಗೆ ಅವತಾರದ ಈ ವಿಶ್ವಾಸವು ಹಿಂದೂ ಧರ್ಮದ ಜೀವಾಳವಾಗಿದೆ. ಆಧುನಿಕ ಯುಗದ ಹಿಂದೂ ತತ್ವಜ್ಞಾನಿ ಮತ್ತು ಚಿಂತಕರೆಲ್ಲಾ ಈ ಸಿದ್ಧಾಂತವನ್ನು ಒಪ್ಪಿ ಅದನ್ನು ಬೆಂಬಲಿಸುತ್ತಾರೆ. ವಿಷ್ಣುವು ಕೆಲವೊಮ್ಮೆ ನರಸಿಂಹಾವತಾರದಲ್ಲಿ ಸಿಂಹದ ರೂಪದಲ್ಲೂ ಮತ್ತೆ ಕೆಲವೊಮ್ಮೆ ಹಂದಿಯ ಅವತಾರದಲ್ಲೂ ಕಾಣಿಸಿಕೊಳ್ಳುತ್ತಾನೆ.

3. ಪುನರ್ಜನ್ಮ

ಹಿಂದೂ ಧರ್ಮದ ಮೂರನೆಯ ಪ್ರಸಿದ್ಧ ಕಲ್ಪನೆ ಪುನರ್ಜನ್ಮವಾಗಿದೆ. ವೇದಗಳಲ್ಲಿ ಪುನರ್ಜನ್ಮದ ಪ್ರಸ್ತಾಪವಿಲ್ಲ. ಅದರಲ್ಲಿ ಇಸ್ಲಾಮ್ ಧರ್ಮದಂತೆ ಪಿತೃ ಲೋಕ ಅಥವಾ ಪರಲೋಕದ ಕಲ್ಪನೆಯೇ ಕಾಣಿಸುತ್ತದೆ. ಆದರೆ ಮುಂದೆ ಸೂತ್ರಗಳಲ್ಲಿ ಪಿತೃ ಲೋಕದ ಜತೆಗೆ ಪುನರ್ಜನ್ಮದ ಕಲ್ಪನೆಯೂ ಕಾಣಸಿಗುತ್ತದೆ. ಅನಂತರ ಪುರಾಣಗಳ ಕಾಲದಲ್ಲಿ ಪರಲೋಕ ಮತ್ತು ಪುನರ್ಜನ್ಮಗಳೆರಡರ ಪ್ರಸ್ತಾಪವೂ ಜತೆ ಜತೆಗೇ ಸಾಗುತ್ತದೆ. ಇಂದಿನ ಎಲ್ಲ ಹಿಂದೂ ಪಂಥಗಳಲ್ಲಿ ಇದೊಂದು ಸರ್ವಸಮ್ಮತ ಕಲ್ಪನೆಯಾಗಿದೆ. ವಿವೇಕಾನಂದ ಮತ್ತು ಗಾಂಧೀಜಿಯವರೂ ಈ ಸಿದ್ಧಾಂತವನ್ನು ಒಪ್ಪುತ್ತಾರೆ. ಆಚಾರ್ಯ ರಜನೀಶರೂ ಇದನ್ನು ಪ್ರತಿಪಾದಿಸಿದ್ದಾರೆ.

ಈ ನಂಬಿಕೆಯ ಪ್ರಕಾರ ಮನುಷ್ಯನ ಆತ್ಮವು ಒಂದರ ನಂತರ ಇನ್ನೊಂದು ಶರೀರವನ್ನು ಪ್ರವೇಶಿಸುತ್ತಿರುತ್ತದೆ. ಕೊನೆಗೆ ಈ ಪರಂಪರೆ ಮುಂದುವರಿಯುವುದರಲ್ಲಿ ಆಸಕ್ತಿಯಿಲ್ಲದೆ ಅದು ಸ್ವತಂತ್ರವಾಗುತ್ತದೆ. ಅನಂತರ ಅದೆಂದೂ ಹುಟ್ಟಿ ಬರುವುದಿಲ್ಲ. ಈ ನಂಬಿಕೆಯ ಇನ್ನೊಂದು ವಿವರಣೆಯ ಪ್ರಕಾರ ಮನುಷ್ಯನು ತನ್ನ ಒಳ್ಳೆಯ ಅಥವಾ ಕೆಟ್ಟ ಕರ್ಮಗಳ ಶಿಕ್ಷೆ ಅಥವಾ ಪುರಸ್ಕಾರ ಪಡೆಯಲಿಕ್ಕಾಗಿ ಇದೇ ಜಗತ್ತಿನಲ್ಲಿ ಪುನಃಪುನಃ ಹುಟ್ಟಿ ಬರುತ್ತಾನೆ. ತನ್ನ ಕರ್ಮಗಳಿಗನುಸಾರವಾಗಿ ಒಮ್ಮೆ ಅವನು ಮಾನವ ರೂಪ ತಾಳಿದರೆ ಇನ್ನೊಮ್ಮೆ ಪ್ರಾಣಿ-ಪಕ್ಷಿ, ಕ್ರಿಮಿ-ಕೀಟಗಳ ಅಥವಾ ಗಿಡ-ಮರಗಳ ರೂಪದಲ್ಲಿ ಇದೇ ಜಗತ್ತಿಗೆ ಮರಳಿ ಬರುತ್ತಾನೆ. ಮನುಸ್ಮೃತಿಯ ಪ್ರಕಾರ ಕೇವಲ ಮೂರು ವರ್ಣಗಳಿಗೆ ಪುನರ್ಜನ್ಮವಿದೆ. ಅವುಗಳೆಂದರೆ ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯ. ನಾಲ್ಕನೆಯ ವರ್ಣವಾದ ಶೂದ್ರರಿಗೆ ಕೇವಲ ಒಂದೇ ಜನ್ಮವಿರುವುದು.

ಪುನರ್ಜನ್ಮದ ಈ ಸಿದ್ಧಾಂತವು ಮಾನವ ಜೀವನದ ಮೇಲೆ ಬೀರುವ ದೂರಗಾಮಿ ಪರಿಣಾಮಗಳನ್ನು ಸುಲಭವಾಗಿ ಗ್ರಹಿಸಬಹುದಾಗಿದೆ. ಪ್ರಥಮ ವಿವರಣೆಯ ಪ್ರಕಾರ ಮಾನವನ ಆತ್ಮವು ಒಂದು ಶರೀರದಿಂದ ಇನ್ನೊಂದು ಶರೀರಕ್ಕೆ ನಿರಂತರ ವರ್ಗಾವಣೆ ಹೊಂದುತ್ತಿರುತ್ತದೆ. ಅವನು ತನ್ನ ಒಳ್ಳೆಯ ಅಥವಾ ಕೆಟ್ಟ ಕರ್ಮಗಳಿಗನುಸಾರ ಒಳ್ಳೆಯ ಅಥವಾ ಕೆಟ್ಟ ಮನುಷ್ಯನ ರೂಪದಲ್ಲಿ ಜನ್ಮ ತಾಳುತ್ತಿರುತ್ತಾನೆ. ಒಳ್ಳೆಯ ಮನುಷ್ಯನು ತನ್ನ ಒಳಿತಿನ ಕಾರಣದಿಂದ ಒಳ್ಳೆಯ ಮನುಷ್ಯನ ರೂಪ ತಾಳಿದರೆ, ಕೆಟ್ಟ ಮನುಷ್ಯನು ತನ್ನ ಕೆಡುಕಿನ ಪರಿಣಾಮ ಸ್ವರೂಪವಾಗಿ ಕೆಟ್ಟ ಮನುಷ್ಯನ ರೂಪ ಧರಿಸುತ್ತಾನೆ. ಮನುಷ್ಯನ ಕೆಡುಕು ಮಿತಿಮೀರಿದಾಗ ಅವನ ಕೆಡುಕಿನ ಪ್ರಮಾಣಕ್ಕನುಸಾರವಾಗಿ ಒಳ್ಳೆಯ ಅಥವಾ ಕೆಟ್ಟ ಪ್ರಾಣಿ ಅಥವಾ ಇನ್ನಿತರ ಜೀವಿಯ ರೂಪದಲ್ಲಿ ಜನ್ಮ ತಾಳುತ್ತಾನೆ. ಹೀಗೆ ಜನ್ಮ ತಾಳಿದ ಪ್ರಾಣಿಯು ತನ್ನ ಉತ್ತಮ ಕರ್ಮಗಳಿಂದ ಹಂತಹಂತವಾಗಿ ಪ್ರಗತಿ ಹೊಂದಿ ಮನುಷ್ಯಜನ್ಮ ತಾಳುವ ಸಾಧ್ಯತೆಯೂ ಇದೆ. ಎಲ್ಲಿಯ ವರೆಗೆಂದರೆ ಆತ್ಮವು ಈ ರೀತಿಯ ಜನ್ಮದಿಂದ ವಿರಕ್ತಿ ಹೊಂದಿ ಮುಕ್ತಿ ಪಡೆಯುತ್ತದೆ. ಇನ್ನೊಂದು ವಿವರಣೆಯ ಪ್ರಕಾರ ಮನುಷ್ಯನು ತನ್ನ ಅತ್ಯಂತ ಕೆಟ್ಟ ಕರ್ಮಗಳ ಪರಿಣಾಮವಾಗಿ ಇನ್ನೊಂದು ಜನ್ಮದಲ್ಲಿ ಪ್ರಾಣಿ-ಪಕ್ಷಿ

ಹಾಗೂ ಕ್ರಿಮಿ-ಕೀಟ ಮಾತ್ರವಲ್ಲ ಗಿಡ-ಮರ ಮತ್ತು ಹುಲ್ಲು-ಕಡ್ಡಿಗಳ ರೂಪದಲ್ಲೂ ಜನ್ಮ ತಾಳಬಹುದು. ಪ್ರಾಣಿ ಮತ್ತು ವೃಕ್ಷಗಳು ಮಾನವ ಜೀವನದ ಅತ್ಯಮೂಲ್ಯ ಅನುಗ್ರಹವಾಗಿದೆ. ಜನಸಂಖ್ಯಾ ಸ್ಫೋಟದಿಂದ ತತ್ತರಿಸುತ್ತಿರುವ ಆಧುನಿಕ ಯುಗದ ಸರಕಾರಗಳು ಉತ್ಪತ್ತಿ ಮತ್ತು ಜಾನುವಾರುಗಳ ಹೆಚ್ಚಳವನ್ನು ತಮ್ಮ ಕಾರ್ಯಸೂಚಿಯ ಪ್ರಮುಖ ಅಂಗವಾಗಿ ಘೋಷಿಸಿವೆ. ಆದ್ದರಿಂದ ಹಿಂದೂ ಧರ್ಮದ ಈ ಪುನರ್ಜನ್ಮ ಸಿದ್ಧಾಂತದಿಂದ ಪಾಪ ಮತ್ತು ಅಪರಾಧ ಕೃತ್ಯಗಳಿಗೆ ಪ್ರೋತ್ಸಾಹ ಸಿಗುತ್ತದೆ. ಮನುಷ್ಯರು ಎಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಅಪರಾಧ ಕೃತ್ಯವನ್ನೆಸಗುವರೋ ಅಷ್ಟೇ ಪ್ರಮಾಣದಲ್ಲಿ ಈ ಲೋಕದಲ್ಲಿ ಪ್ರಾಣಿಗಳ ಮತ್ತು ಗಿಡ-ಮರಗಳ ಬೆಳವಣಿಗೆ ಹೆಚ್ಚುವುದು. ಈ ರೀತಿ ಜನಸಂಖ್ಯಾ ಸ್ಫೋಟದ ಸಮಸ್ಯೆ ನಿವಾರಣೆಯಾಗುವುದರ ಜತೆಗೆ ಜಾನುವಾರು ಮತ್ತು ವೃಕ್ಷಗಳ ಹೆಚ್ಚಳವನ್ನು ಸಾಧಿಸಿದಂತಾಗುವುದು. ಪುನರ್ಜನ್ಮದ ಈ ಸಿದ್ಧಾಂತದ ಇನ್ನೊಂದು ಪರಿಣಾಮವೇನೆಂದರೆ ಲೋಕದಲ್ಲಿ ಸಂಕಷ್ಟಕ್ಕೀಡಾದವರು ಮತ್ತು ದುಃಖ ಪೀಡಿತರ ನೆರವಿಗೆ ಯಾರೂ ಹೋಗಲಾರರು. ಏಕೆಂದರೆ ಅವರ ನಂಬಿಕೆಯಂತೆ ಅದು ಅವರ ಪೂರ್ವಜನ್ಮದ ಕರ್ಮಗಳ ಫಲವಾಗಿದೆ.

4. ವರ್ಣಾಶ್ರಮ

ಹಿಂದೂ ನಂಬಿಕೆಗಳ ನಾಲ್ಕನೆಯ ಮುಖ್ಯ ಅಂಶ 'ವರ್ಣಾಶ್ರಮ'ವಾಗಿದೆ. ಇದರ ಪ್ರಕಾರ ಬ್ರಹ್ಮನು ಪ್ರಥಮ ದಿನವೇ ಜನರನ್ನು ನಾಲ್ಕು ಅನುಲ್ಲಂಘನೀಯ ಹಾಗೂ ವಿಭಿನ್ನ ವರ್ಣಗಳಲ್ಲಿ ಸೃಷ್ಟಿಸಿರುವನು. ಮನುಷ್ಯನಲ್ಲಿ ಅತ್ಯುನ್ನತ ಸ್ಥಾನ ಬ್ರಾಹ್ಮಣರಿಗಿದೆ. ಅವರನ್ನು ಬ್ರಹ್ಮನು ತನ್ನ ಮುಖದಿಂದ ಸೃಷ್ಟಿಸಿದನು. ಅದರ ನಂತರದ ಸ್ಥಾನ ಕ್ಷತ್ರಿಯರದ್ದಾಗಿದ್ದು ಅವರನ್ನು ಬಾಹುಗಳಿಂದ, ವೈಶ್ಯರನ್ನು ತೊಡೆಗಳಿಂದ ಮತ್ತು ಅತ್ಯಂತ ಕೆಳಗಿನ ಸ್ಥಾನದವರಾದ ಶೂದ್ರರನ್ನು ಬ್ರಹ್ಮನು ತನ್ನ ಪಾದದಿಂದ ಸೃಷ್ಟಿಸಿದನು. ಹಿಂದೂ ಧರ್ಮದಲ್ಲಿ ವೇದಗಳ ನಂತರದ ಸ್ಥಾನ ಸ್ಮೃತಿಗಳಿಗೆ ಇದೆ. ಆ ಪೈಕಿ ಮನುಸ್ಮೃತಿಯು ಅತ್ಯಂತ ಮಹತ್ವಪೂರ್ಣವಾಗಿದೆ. ವರ್ಣಾಶ್ರಮದ ಈ ವಿವರಣೆಯನ್ನು ಮನುಸ್ಮೃತಿಯಲ್ಲೇ ನೀಡಲಾಗಿದೆ. ಅದರ ಪ್ರಕಾರ ಶೂದ್ರನ ಕೆಲಸವು ಪ್ರಾಮಾಣಿಕವಾಗಿ ಉಳಿದ ಮೂರು ವರ್ಣಗಳವರ ಸೇವೆ ಮಾಡುವುದಾಗಿದೆ. ಬ್ರಾಹ್ಮಣನ ಹೆಸರು ಪರಿಶುದ್ಧತೆಯನ್ನು ಸೂಚಿಸುವಂತಿರಬೇಕು. ಕ್ಷತ್ರಿಯನದು ಶಕ್ತಿಯನ್ನು ಸೂಚಿಸುವಂತಿರಬೇಕು. ವೈಶ್ಯನ ಹೆಸರು ಸಂಪತ್ತಿನ ಸೂಚಕವಾಗಿರಬೇಕು ಮತ್ತು ಶೂದ್ರನದು ನಿಂದ್ಯತೆಯನ್ನು ಸೂಚಿಸುವಂತಿರಬೇಕು. ಶೂದ್ರನ ಪುತ್ರಿಯನ್ನು ತನ್ನ ಮಂಚದಲ್ಲಿ ಕುಳ್ಳಿರಿಸಿದರೆ ಬ್ರಾಹ್ಮಣನು ನರಕಕ್ಕೆ ಹೋಗುತ್ತಾನೆ. ಹಾಗೆಯೇ ಶೂದ್ರನಿಗೆ ಧರ್ಮದ ಶಿಕ್ಷಣ ನೀಡುವವನು ಮತ್ತು ಅವನಿಗೆ ಧಾರ್ಮಿಕ ವಿಧಿಗಳನ್ನು ಬೋಧಿಸುವವನು ಅವನ ಜತೆಯಲ್ಲೇ ನರಕಕ್ಕೆ ಹೋಗುವನು. ಬ್ರಾಹ್ಮಣನು ಪ್ರಮಾದವಶಾತ್ ಶೂದ್ರನ ಊಟವನ್ನು ಸೇವಿಸಿದರೆ ಆತ ಮೂರು ದಿನಗಳ ತನಕ ಉಪವಾಸ ವ್ರತ ಆಚರಿಸಬೇಕು. ಒಂದು ವೇಳೆ ಉದ್ದೇಶಪೂರ್ವಕವಾಗಿ ತಿಂದರೆ ಮುಟ್ಟಿನ ರಕ್ತ, ಮಲ ಮೂತ್ರಗಳನ್ನು ಸೇವಿಸಿದವನು ಮಾಡುವ ಪ್ರಾಯಶ್ಚಿತ್ತವನ್ನೇ ಅವನೂ

ಮಾಡಬೇಕು. ಬ್ರಾಹ್ಮಣನ ಸೇವೆಯಲ್ಲಿ ತೊಡಗಿರುವುದು ಶೂದ್ರನ ಅತ್ಯುತ್ತಮ ಕಾಯಕ. ಅದರ ಹೊರತು ಯಾವ ಕೆಲಸವೂ ಅವನಿಗೆ ಪ್ರಯೋಜನಕಾರಿಯಾಗದು. ನಾಲ್ಕನೆಯವನು ಮೊದಲಿನ ಮೂವರನ್ನು ಹೀನಾಯವಾಗಿ ಬಯ್ದರೆ ನಾಲಿಗೆ ಕಳೆದುಕೊಳ್ಳುವನು. ಅವನು ಕೆಳಗಿನವನು. ಜಾತಿಯ ಹೆಸರು ಕರೆದು ಬಯ್ಯುವವನಿಗೆ ಕಾಯಿಸಿದ ಕಬ್ಬಿಣದ ಸರಳನ್ನು ಹತ್ತಂಗುಲದಷ್ಟು ಬಾಯಿಗೆ ತುರುಕಬೇಕು. ಬೆಕ್ಕು, ಮುಂಗುಸಿ, ಮೈನಾ ಪಕ್ಷಿ, ಕಪ್ಪೆ, ನಾಯಿ, ಉಡ, ಗೂಬೆ, ಕಾಗೆ ಇವುಗಳನ್ನು ಕೊಂದರೆ ಅದಕ್ಕೆ ಒಬ್ಬ ಶೂದ್ರನನ್ನು ಕೊಂದುದಕ್ಕೆ ಮಾಡುವ ಪ್ರಾಯಶ್ಚಿತ್ತವನ್ನೇ ಮಾಡಬೇಕು.

ಮನುಸ್ಮೃತಿಯಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ಪ್ರಸ್ತುತ ವರ್ಣಾಶ್ರಮದ ವಿಶ್ವಾಸ ಮತ್ತು ಅದಕ್ಕೆ ಸಂಬಂಧಿಸಿದ ಪೂರ್ವೋಕ್ತ ನಿಯಮಗಳು ಹಿಂದೂ ಧರ್ಮದ ಸರ್ವಸಮ್ಮತ ನಂಬಿಕೆಯಾಗಿದೆ. ಹಿಂದೂ ಧರ್ಮದ ಪುನರುತ್ಥಾನ ಚಳವಳಿಗಳ ಆಧುನಿಕ ಯುಗದ ಅತಿ ದೊಡ್ಡ ರೂವಾರಿಯಾಗಿರುವ ಆರ್ಯ ಸಮಾಜದ ಸಂಸ್ಥಾಪಕ ಸ್ವಾಮಿ ದಯಾನಂದ ಸರಸ್ವತಿಯವರು ಕೂಡಾ ಈ ನಾಲ್ಕು ವರ್ಣಗಳ ವಿಂಗಡನೆಯನ್ನು ಮತ್ತು ಅವುಗಳ ಪೂರ್ವೋಕ್ತ ಕರ್ತವ್ಯಗಳನ್ನು ಅಂಗೀಕರಿಸುತ್ತಾರೆ. ರಾಜಕೀಯ ಅಗತ್ಯಗಳಿಗಾಗಿ ಆಧುನಿಕ ಹಿಂದೂ ಸಮಾಜದಲ್ಲಿ ಹಿಂದೂ ಸಮಾಜದ ಐಕ್ಯ ಮತ್ತು ಸಮಾನತೆಯ ಘೋಷಣೆಯನ್ನು ಮುಗಿಲು ಮುಟ್ಟುವಂತೆ ಮೊಳಗಿಸಿದರೂ ಈ ವರ್ಣಾಶ್ರಮದ ಸಿದ್ಧಾಂತವಿಲ್ಲದ ಒಂದು ಹಿಂದೂ ಧರ್ಮದ ಕಲ್ಪನೆಯೂ ಅಸಾಧ್ಯವಾಗಿದೆ. ಆದ್ದರಿಂದಲೇ ಪುರಿಯ ಶಂಕರಾಚಾರ್ಯರು ವರ್ಣಾಶ್ರಮ ಪದ್ಧತಿಯನ್ನು ಪ್ರಬಲವಾಗಿ ಸಮರ್ಥಿಸಿರುವರು.

❑

ಬೌದ್ಧ ಮತ್ತು ಜೈನ ಧರ್ಮ

ಭಾರತೀಯ ಧರ್ಮಗಳ ಪೈಕಿ ಬೌದ್ಧ ಮತ್ತು ಜೈನ ಧರ್ಮಗಳು 'ಸರ್ವ ಧರ್ಮ ಸಮಭಾವ'ದ ಸಿದ್ಧಾಂತಕ್ಕೆ ಒತ್ತು ಕೊಡುವುದಿಲ್ಲ. ಆದರೆ ಧರ್ಮಗಳ ಮೂಲಭೂತ ವ್ಯತ್ಯಾಸದ ಅಧ್ಯಯನ ಮಾಡುವಾಗ ಅವುಗಳ ಮೂಲಭೂತ ನಂಬಿಕೆ ಮತ್ತು ಸಿದ್ಧಾಂತಗಳನ್ನು ಅರಿಯಬೇಕಾಗಿದೆ. ಹಿಂದೂ ಧರ್ಮದ ಮಹಾನ್ ನಾಯಕರು ಮತ್ತು ದಾರ್ಶನಿಕರು ಈ ಎರಡೂ ಧರ್ಮಗಳನ್ನು ತಮ್ಮ ಧರ್ಮದ ಭಾಗಗಳೆಂದೇ ಹೇಳುತ್ತಾರೆ. ಈ ಕಾರಣದಿಂದಲೂ ಬೌದ್ಧ ಮತ್ತು ಜೈನ ಧರ್ಮದ ಮೂಲ ಚಿಂತನೆಯ ಮೇಲೆ ದೃಷ್ಟಿ ಹಾಯಿಸುವುದು ಅಗತ್ಯವಾಗಿದೆ. ಬೌದ್ಧ ಮತ್ತು ಜೈನ ಧರ್ಮದ ನೈಜ ಕಾಳಜಿ ಜನರನ್ನು ದುಃಖದಿಂದ ವಿಮೋಚಿಸುವುದಾಗಿದೆ. ಈ ಜಗತ್ತನ್ನು ಯಾರು ಸೃಷ್ಟಿಸಿದ್ದಾನೆಂಬ ವಿಷಯದಲ್ಲಿ ಬೌದ್ಧ ಧರ್ಮಕ್ಕೆ ಯಾವುದೇ ಆಸಕ್ತಿಯಿಲ್ಲ..ಸೃಷ್ಟಿಕರ್ತನ ಕುರಿತು ಅದು ತಟಸ್ಥ ನಿಲುವನ್ನು ತಾಳಿದೆ. ಆದ್ದರಿಂದ ವಸ್ತುತಃ ಅದೊಂದು ನಾಸ್ತಿಕ ಧರ್ಮವೇ ಆಗಿದೆ. ಬೌದ್ಧರನ್ನು ಏಕದೇವ ಸಿದ್ಧಾಂತವು ಎಂದೂ ಆಕರ್ಷಿಸಿರಲಿಲ್ಲ. ಆದ್ದರಿಂದ ಬಹುದೇವ ವಿಶ್ವಾಸ ಆ ಧರ್ಮದಲ್ಲಿ ಸ್ಥಾನ ಪಡೆಯಿತು. ಮಾತ್ರವಲ್ಲ ಅವರು ಹಿಂದೂ ಪುರಾಣಗಳನ್ನೂ ದೇವಿ-ದೇವತೆಗಳನ್ನೂ ತಮ್ಮ ವಿಶ್ವಾಸದ ಭಾಗವಾಗಿ ಮಾಡಿಕೊಂಡರು. ಗೌತಮ ಬುದ್ಧನಿಗೆ ದೇವನಿಗಿಂತಲೂ ಮಿಗಿಲಾದ ಸ್ಥಾನವನ್ನು ಕಲ್ಪಿಸಲಾಯಿತು. ಬೌದ್ಧ ಧರ್ಮದಲ್ಲಿ ಅದ್ವೈತವಾದದ ಪ್ರತಿಬಿಂಬವೂ ನಮಗೆ ಕಂಡು ಬರುತ್ತದೆ. ಪುನರ್ಜನ್ಮದ ಕಲ್ಪನೆಯೂ ಕಾಣಸಿಗುತ್ತದೆ.

ಜೈನ ಧರ್ಮದ ಆರಂಭವೇ ಪ್ರಸಕ್ತ ವಿಶ್ವದ ಅನಶ್ವರತೆ ಮತ್ತು ದೇವನ ನಿರಾಕರಣೆಯಿಂದಾಗುತ್ತದೆ. ಜೈನ ಧರ್ಮದ ಪ್ರಕಾರ ಈ ವಿಶ್ವಾಸವು ಅನಾದಿ ಮತ್ತು ಅನಂತವಾಗಿದೆ. ಯಾವುದೇ ವಿಶಿಷ್ಟ ಶಕ್ತಿಯು ಅದನ್ನು ಸೃಷ್ಟಿಸಿಲ್ಲ. ಭಾರತದ ಹೆಚ್ಚಿನೆಲ್ಲ ಜೈನೇತರ ಸಂಶೋಧಕರು ಜೈನ ಧರ್ಮವನ್ನು ನಾಸ್ತಿಕ ಧರ್ಮವೆಂದೇ ಪರಿಗಣಿಸುತ್ತಾರೆ. ಬಹುದೇವ ವಿಶ್ವಾಸ ಮತ್ತು ಮೂರ್ತಿ ಪೂಜೆಯಲ್ಲೂ ಜೈನ ಧರ್ಮವು ಬೌದ್ಧ ಧರ್ಮಕ್ಕಿಂತ ಮುಂದಿದೆ. ಮೂಲಭೂತವಾಗಿ ಜೈನರ ಎರಡು ಪಂಥಗಳಿವೆ. ದಿಗಂಬರ ಮತ್ತು ಶ್ವೇತಾಂಬರ. ಎರಡೂ ಪಂಥಗಳು ಮೂರ್ತಿಪೂಜೆ ಮಾಡುತ್ತವೆ. ಜೈನರು ಸಾಮಾನ್ಯವಾಗಿ ತಮ್ಮ ಮಹಾತ್ಮರ ಮತ್ತು ತೀರ್ಥಂಕರರ ಮೂರ್ತಿಗಳನ್ನು ಮಾಡಿ ಪೂಜಿಸುತ್ತಾರೆ. ಸ್ವಾಮಿ ದಯಾನಂದ

ಸರಸ್ವತಿಯವರ ಪ್ರಕಾರ ಜೈನರಿಂದಲೇ ಹಿಂದೂ ಧರ್ಮದಲ್ಲಿ ಮೂರ್ತಿ ಪೂಜೆ ಬಂದಿದೆ. ಜೈನ ನಂಬಿಕೆಯ ಪ್ರಕಾರ ಪರಮಾತ್ಮನೆಂದರೆ ಶುದ್ಧ ಮತ್ತು ಮುಕ್ತಿ ಗಳಿಸಿದ ಆತ್ಮವಾಗಿದೆ. ಅದು ಸಂಸಾರಿಯಾದ ಜೀವಿಗೆ ಆದರ್ಶವಾಗಿ ಮುಕ್ತಿ ಮಾರ್ಗದಲ್ಲಿ ಅವನ ಮಾರ್ಗದರ್ಶಿಯಾಗಿರುತ್ತದೆ. ಆದ್ದರಿಂದ ಪ್ರತಿಯೊಬ್ಬ ವ್ಯಕ್ತಿ ತನ್ನ ಮುಕ್ತಿಗಾಗಿ ಇಂತಹ ಆತ್ಮಗಳನ್ನು ಪೂಜಿಸಬೇಕು. ಈ ಧರ್ಮದ ಕಲ್ಪನೆಯಂತೆ ಅದರ ನೇತಾರರಾದ 'ತೀರ್ಥಂಕರರು' ದೇವರಾಗಿದ್ದಾರೆ. ಈ ರೀತಿ ದೇವತ್ವವನ್ನು ಪ್ರಾಪ್ತಗೊಳಿಸಿದ ಅಸಂಖ್ಯ ಆತ್ಮಗಳು ದೇವರ ಸ್ಥಾನಮಾನಗಳನ್ನು ಗಳಿಸುತ್ತವೆ. ವ್ಯಕ್ತಿಯ ಆತ್ಮವು ನಿರಂತರ ಪರಿಶ್ರಮಗಳ ಮೂಲಕ ದೇವತ್ವದ ಸ್ಥಾನವನ್ನು ಗಳಿಸುತ್ತದೆ. ಮಾನವ ಆತ್ಮವು ಬಾಹ್ಯ ಭೌತಿಕ ಕ್ರಿಯೆಗಳಿಂದ ಮುಕ್ತಿ ಪಡೆದಾಗ ದೇವತ್ವದ ಉನ್ನತ ಮಟ್ಟಕ್ಕೆ ತಲುಪುತ್ತದೆ.

ಜೈನ ಧರ್ಮದಲ್ಲಿ ದೇವಿ-ದೇವತೆಗಳ ಕಲ್ಪನೆಯೂ ಇದೆ. ದಿಗಂಬರರ ನೂರು ಮತ್ತು ಶ್ವೇತಾಂಬರರ 64 ದೇವಿ-ದೇವತೆಗಳಿವೆ. ಜೈನ ಮತದಲ್ಲಿ ಪುನರ್ಜನ್ಮದ ಕಲ್ಪನೆಯೂ ಇದೆ. ಜೈನ ಧರ್ಮದ ಪ್ರಕಾರ ಸ್ತ್ರೀ ಪೂರ್ಣ ತ್ಯಾಗ ಮಾಡುವಂತಿಲ್ಲ. ಅದು ಪುರುಷ ವರ್ಗಕ್ಕಿಂತ ನೈಸರ್ಗಿಕವಾಗಿ ಬಲಹೀನವಾಗಿದೆ. ಆದ್ದರಿಂದ ಸ್ತ್ರೀಯರು ತಾವು ಶೇಖರಿಸಿದ ಪಾಪಗಳನ್ನು ಅನುಭವಿಸಲು ಮತ್ತು ಮುಕ್ತಿ ಗಳಿಸಲು ಬೇಕಾದ ತಪಸ್ಸನ್ನು ತಮ್ಮ ಪ್ರಸಕ್ತ ಶರೀರದಿಂದ ಮಾಡಲಾರರು. ಆದ್ದರಿಂದ ಅವರು ಮತ್ತೆ ಪುರುಷ ಕಾಯದಲ್ಲಿ ಸೃಷ್ಟಿಯಾಗಿ ಬರಬೇಕಾಗುತ್ತದೆ. ಆಗ ಕಠಿಣ ತಪಸ್ಸಿನಿಂದ ಆಕೆ ಮುಕ್ತಿ ಪಡೆಯಬಲ್ಲಳು. ಶೂದ್ರರು ಮತ್ತು ಚಾಂಡಾಲರು ಕೂಡಾ ತಮ್ಮ ಪ್ರಸಕ್ತ ಶರೀರದಲ್ಲಿ ಮುಕ್ತಿ ಪಡೆಯಲಾರರು. ಅಸ್ಪೃಶ್ಯತೆ ಮತ್ತು ಸಾಮಾಜಿಕ ಅಸಮಾನತೆಯ ಕಲ್ಪನೆ ಕೂಡಾ ಜೈನ ಮತದಲ್ಲಿದೆ.

❑

ಸಿಕ್ಖ್ ಧರ್ಮ

ಭಾರತೀಯ ಧರ್ಮಗಳ ಪೈಕಿ ಅತ್ಯಂತ ಕಡಿಮೆ ಪ್ರಾಯದ ಅಂದರೆ ಕೇವಲ 500 ವರ್ಷ ಹಳೆಯ ಧರ್ಮ 'ಸಿಕ್ಖ್ ಧರ್ಮ'ವಾಗಿದೆ. ಈ ಧರ್ಮವು 'ಸರ್ವ ಧರ್ಮ ಸಮಾನತೆ'ಯ ಸಿದ್ಧಾಂತವನ್ನು ಹಿಂದೂ ಧರ್ಮಕ್ಕಿಂತಲೂ ಹೆಚ್ಚು ಪ್ರಬಲವಾಗಿ ಪ್ರತಿಪಾದಿಸುತ್ತದೆ. ಹಿಂದೂ ಧರ್ಮದಲ್ಲಿ ಈ ಸಿದ್ಧಾಂತದ ಆಧಾರ ಭಗವದ್ಗೀತೆಯ ಈ ಕೆಳಗಿನ ಶ್ಲೋಕವಾಗಿದೆ-

"ಯಾವ ರೂಪದಲ್ಲಿ ಜನರು ನನ್ನನ್ನು ಪೂಜಿಸುತ್ತಾರೋ ಅದೇ ರೂಪದಲ್ಲಿ ನಾನು ಅವರನ್ನು ಪರಿಪಾಲಿಸುತ್ತೇನೆ. ಜನರು ಅನೇಕ ಮಾರ್ಗಗಳಿಂದ ನನ್ನ ಉಪಾಸನೆ ಮಾಡುತ್ತಾರಾದರೂ ಅದೆಲ್ಲವೂ ನನ್ನೆಡೆಗೇ ತಲುಪುತ್ತದೆ."

ಸಿಕ್ಖ್ ಧರ್ಮದಲ್ಲಿ ಇದನ್ನು ಇನ್ನಷ್ಟು ಪ್ರಬಲ ಮತ್ತು ಸ್ಪಷ್ಟವಾಗಿ ಪ್ರತಿಪಾದಿಸಲಾಗಿದೆ. ಸಿಕ್ಖ್ ಧರ್ಮದ ಸಂಸ್ಥಾಪಕರಾದ ಗುರುನಾನಕ್ ತಮ್ಮ ಗ್ರಂಥ ಸಾಹೆಬ್‌ನಲ್ಲಿ ಹೀಗೆ ಬರೆದಿರುವರು:

"ಹಿಂದೂಗಳಲ್ಲಿ ಆರು ಪಂಥಗಳಿವೆ. ಪ್ರತಿಯೊಂದಕ್ಕೂ ತನ್ನದೇ ಆದ ಒಬ್ಬ ಗುರು(ಸ್ಥಾಪಕ) ಇದ್ದಾನೆ. ಎಲ್ಲ ಗುರುಗಳ ಗುರು ಒಬ್ಬನೇ ಆಗಿದ್ದಾನೆ. ಆದರೆ ಅವನ ರೂಪ ಅನೇಕ ಇವೆ. ಯಾವ ಪಂಥದಲ್ಲಿ ಸೃಷ್ಟಿಕರ್ತನ ಚಮತ್ಕಾರಗಳು ವಿವರಿಸಲ್ಪಟ್ಟಿದ್ದರೂ ಅದನ್ನು ನಿಮ್ಮ ಪಂಥವೆಂಬಂತೆ ಸ್ವೀಕರಿಸಿರಿ. ಇದರಲ್ಲೇ ನಿಮ್ಮ ಉನ್ನತಿಯಿದೆ. ಸೂರ್ಯ ಒಂದೇ ಆದರೆ ಋತುಗಳು ಅನೇಕ ಇವೆ... ಓ ನಾನಕ್! ರೂಪಗಳು ಅನೇಕ ಇದ್ದರೂ ದೇವನು ಒಬ್ಬನೇ ಆಗಿದ್ದಾನೆ."

ಸಿಕ್ಖರ ಹತ್ತನೆಯ ಹಾಗೂ ಅಂತಿಮ ಗುರು - ಗುರು ಗೋವಿಂದ ಸಿಂಗರೂ 'ಸರ್ವಧರ್ಮ ಸಮಾನತೆ'ಯ ಈ ಸಿದ್ಧಾಂತವನ್ನು ಬಹಳ ಪ್ರಬಲ ಮತ್ತು ಸ್ಪಷ್ಟವಾಗಿ ವಿವರಿಸಿದ್ದಾರೆ:

"ಮಂದಿರ ಮತ್ತು ಮಸೀದಿ ಒಂದೇ ಆಗಿದೆ. ಹಿಂದೂ ಪೂಜೆ ಮತ್ತು ಮುಸ್ಲಿಮ್ ನಮಾಝ್ ಕೂಡಾ ಒಂದೇ ಆಗಿದೆ."

ಸಿಕ್ಖ್ ಧರ್ಮವು ಹಿಂದೂ, ಬೌದ್ಧ ಮತ್ತು ಇಸ್ಲಾಮ್ ಧರ್ಮದ ಮಿಶ್ರಣವಾಗಿದೆ. ಆದರೆ ಅದರಲ್ಲಿ ಇತರ ಧರ್ಮಗಳಿಗೆ ತೀರಾ ಭಿನ್ನವಾದ ಅನೇಕ ಅಂಶಗಳಿವೆ. ಏಕದೇವ ವಿಶ್ವಾಸಕ್ಕೆ ವಿಶೇಷ ಒತ್ತು ನೀಡಲಾಗಿದ್ದರೂ ಅದರಲ್ಲಿ ಹಿಂದೂ ಬಹುದೇವ ವಿಶ್ವಾಸವೂ ಸಾಕಷ್ಟಿದೆ. ಗುರುನಾನಕರ ಅನೇಕ ದ್ವಿಪದಿಗಳಲ್ಲಿ ಮಾನವ ಸಮಾನತೆ, ಇತರ ಇಸ್ಲಾಮಿ ಬೋಧನೆಗಳ ಜತೆಯಲ್ಲಿ ಏಕದೇವ ವಿಶ್ವಾಸದ ಪ್ರಸ್ತಾಪವೂ ವಿಶೇಷವಾಗಿದೆ. ಆದರೆ ಅದರ ಜತೆ ಅದ್ವೈತ ಸಿದ್ಧಾಂತಕ್ಕೂ ಮೂಲಭೂತ ಪ್ರಾಮುಖ್ಯ ನೀಡಲಾಗಿದೆ. ಜತೆಗೆ ಬಹುದೇವ ವಿಶ್ವಾಸವೂ ಅದರ ವಿಶ್ವಾಸದ ಅವಿಭಾಜ್ಯ ಅಂಗವಾಗಿದೆ. ಅದರ ಗುರುಗಳಿಗೆ ದೇವತ್ವದ ಸ್ಥಾನಮಾನವಿದೆ. ದೇವಿ-ದೇವತೆಗಳಲ್ಲೂ ಅವರಿಗೆ ವಿಶ್ವಾಸವಿದೆ. ಸ್ವಲ್ಪ ಭಿನ್ನ ರೂಪದಲ್ಲಿ ಈ ಧರ್ಮವು ಪುನರ್ಜನ್ಮ ಸಿದ್ಧಾಂತವನ್ನು ಒಪ್ಪುತ್ತದೆ. ಇವುಗಳ ಜತೆಗೇ ಇಸ್ಲಾಮಿನ ಪ್ರಭಾವದಿಂದ ಸಿಕ್ಖ್ ಧರ್ಮದಲ್ಲಿ ಜಾತಿ ಪದ್ಧತಿಯಿಲ್ಲ. ಅದು ಮಾನವ ಸಮಾನತೆಯನ್ನು ಒಪ್ಪುತ್ತದೆ. ಸಿಕ್ಖ್ ಧರ್ಮದಲ್ಲಿ ಗಂಡು ಹೆಣ್ಣಿನ ಸಮಾನತೆಯೂ ಇದೆ. ಇವೆಲ್ಲವೂ ಹಿಂದೂ, ಬೌದ್ಧ, ಜೈನ ಧರ್ಮಗಳ ಶಿಕ್ಷಣಕ್ಕೆ ತದ್ವಿರುದ್ಧವಾಗಿವೆ.

ವಿಭಿನ್ನ ಧರ್ಮಗಳ ಮಧ್ಯೆ ಇರುವ ಈ ಮೂಲಭೂತ ವ್ಯತ್ಯಾಸಗಳ ಹೊರತಾಗಿಯೂ ಎಲ್ಲ ಧರ್ಮಗಳ ವಾಸ್ತವಿಕತೆ ಒಂದೇ ಎನ್ನುವುದು ಮತ್ತು ಅವುಗಳ ಪೈಕಿ ಯಾವುದನ್ನನುಸರಿಸಿದರೂ ಮೋಕ್ಷ ಲಭಿಸುತ್ತದೆನ್ನುವುದು ದೊಡ್ಡ ಮೋಸಗಾರಿಕೆ ಮತ್ತು ವಂಚನೆಯಲ್ಲದೆ ಇನ್ನೇನು?

❑

ಲಿಂಗಾಯತ(ವೀರಶೈವ) ಧರ್ಮ

ಲಿಂಗಾಯತ ಧರ್ಮವು ಕ್ರಿ.ಶ. ಹನ್ನೆರಡನೆಯ ಶತಮಾನದಲ್ಲಿ ಕರ್ನಾಟಕ ಮತ್ತು ಆಂಧ್ರ ಪ್ರದೇಶದ ಕೆಲವು ಪ್ರದೇಶಗಳನ್ನೊಳಗೊಂಡ ದಕ್ಷಿಣ ಭಾರತದಲ್ಲಿ ಉದಯಿಸಿತು. ಇದು ಪೌರೋಹಿತ್ಯ, ಜಾತಿ ಪದ್ಧತಿ, ವರ್ಣಾಶ್ರಮ ಪದ್ಧತಿ, ಉಚ್ಚ-ನೀಚತೆ, ಅಸಮಾನತೆಯಂತಹ ಸಾಮಾಜಿಕ ಪಿಡುಗುಗಳ ವಿರುದ್ಧ ಹೂಡಿದ ಒಂದು ಸುಧಾರಣಾ ಆಂದೋಲನವಾಗಿತ್ತು. ಬಸವೇಶ್ವರ ಅಥವಾ ಬಸವಣ್ಣನವರೇ ಇದರ ಸಂಸ್ಥಾಪಕರಾಗಿದ್ದರು. ಬಸವಣ್ಣ ಮತ್ತು ಚನ್ನಬಸವೇಶ್ವರರನ್ನು ಲಿಂಗಾಯತ ಮತದವರು ತಮ್ಮ ನಾಯಕ ಮತ್ತು ಮಾರ್ಗದರ್ಶಕರೆಂದು ಪರಿಗಣಿಸುತ್ತಾರೆ. ಚನ್ನಬಸವೇಶ್ವರ ಬಸವಣ್ಣನ ಸೋದರ ಪುತ್ರನಾಗಿದ್ದಾನೆ ಎಂದು ಖ್ಯಾತ ಚರಿತ್ರೆಕಾರ ಡಾ| ತಾರಾಚಂದ ಬರೆದಿರುವರು (ನೋಡಿರಿ: ಭಾರತೀಯ ಸಂಸ್ಕೃತಿಯ ಮೇಲೆ ಇಸ್ಲಾಮ್‌ನ ಪ್ರಭಾವ" (ಪುಟ: 115-119).

ಲಿಂಗಾಯತ ಧರ್ಮವು ತನ್ನ ಮೂಲ ರೂಪದಲ್ಲಿ ಒಂದು ಕ್ರಾಂತಿ ಮತ್ತು ಪ್ರಚಲಿತ ಧಾರ್ಮಿಕ ವಿಶ್ವಾಸ-ಶ್ರದ್ಧೆಗಳ ವಿರುದ್ಧ ಒಂದು ಬಂಡಾಯ ಚಳವಳಿಯಾಗಿತ್ತು. ಬಸವಣ್ಣ 'ಅಪ್ಪಟ' ಏಕದೇವಾರಾಧನೆಯ ಪ್ರತಿಪಾದಕರು, ಸೃಷ್ಟಿ-ಲಯ ಕರ್ತನೂ ಜಗತ್ ಪರಿಪಾಲಕನೂ ಆದ ಆ ಏಕೈಕ ದೇವನನ್ನು ಬಸವಣ್ಣ 'ಪರಶಿವ'ನೆಂದು ಸಾರಿದ್ದನು. ಲಿಂಗಾಯತರು ಸರ್ವಶಕ್ತನೂ ಅಸೀಮನೂ ಅನೂಹ್ಯನೂ ಆದ ಆ ಏಕದೇವನನ್ನು ಆರಾಧಿಸುತ್ತಾರೆ. ಅವನನ್ನು ಪರಮಜ್ಯೋತಿ, ಪರಮಾನಂದ, ಮಹಾಮಹಿಮ, ಅವರ್ಣನೀಯ ಮತ್ತು ಅಗಾಧವೆಂದು ನಂಬುತ್ತಾರೆ. ಎಲ್ಲಾ ಆತ್ಮಗಳ ಮತ್ತು ಪ್ರಕೃತಿಯ ಸೃಷ್ಟಿಕರ್ತನೆಂದು ಬಗೆಯುತ್ತಾರೆ.

ಲಿಂಗಾಯತರಲ್ಲಿ ಬಲಿ ಪೀಠವಾಗಲಿ, ವ್ರತಾಚರಣೆಯಾಗಲಿ, ಹಬ್ಬಗಳಾಗಲಿ, ತೀರ್ಥಯಾತ್ರೆಗಳಾಗಲಿ, ಪವಿತ್ರ ನದಿಯಾಗಲಿ ಇಲ್ಲ. ಜಾತಿ ವ್ಯವಸ್ಥೆಯಾಗಲಿ, ಲಿಂಗ

ತಾರತಮ್ಯವಾಗಲಿ ಇಲ್ಲದ ಲಿಂಗಾಯತರಲ್ಲಿ ವಿವಾಹಕ್ಕೆ ಮುಂಚೆ ಮದುಮಗಳ ಒಪ್ಪಿಗೆ ಅಗತ್ಯ. ಬಾಲ್ಯ ವಿವಾಹವು ಕೆಟ್ಟದು. ವಿವಾಹ ವಿಚ್ಛೇದನಕ್ಕೆ ಅನುಮತಿಯಿದೆ. ವಿಧವೆಯರನ್ನು ಗೌರವದಿಂದ ಕಾಣಲಾಗುತ್ತದೆ. ಅವರಿಗೆ ಪುನರ್ವಿವಾಹಕ್ಕೆ ಅನುಮತಿಯಿದೆ. ಶವಗಳನ್ನು ಸುಡಲಾಗುವುದಿಲ್ಲ. ಹೂಳಲಾಗುತ್ತದೆ. ಶವಕ್ಕೆ ಸ್ನಾನ ಮಾಡಿಸಲಾಗುತ್ತದೆ. ಶ್ರಾದ್ಧ (ಮರಣಾನಂತರ ಅದರ ಆತ್ಮ ಶಾಂತಿಗಾಗಿ ಹಿಂದೂಗಳು ಮಾಡುವ ಪುಣ್ಯಕರ್ಮ) ಎಂಬ ಆಚಾರವೇ ಇಲ್ಲ. ಪುನರ್ಜನ್ಮ ಸಿದ್ಧಾಂತವು ಅವರಲ್ಲಿಲ್ಲ.

ಉತ್ತರ ಕರ್ನಾಟಕ ಮತ್ತು ತೆಲಂಗಾಣದಲ್ಲಿ ಅವರು ಜನಸಂಖ್ಯೆಯ ಮೂರನೆಯ ಒಂದಂಶವಾಗಿದ್ದಾರೆ. ಕರ್ನಾಟಕದಲ್ಲಿ ಅದು ಅತ್ಯಂತ ಪ್ರಬಲ ವರ್ಗಗಳಲ್ಲಿ ಒಂದಾಗಿದೆ.

❑

ಯಹೂದಿ ಮತ್ತು ಕ್ರೈಸ್ತ ಧರ್ಮ

ಇಸ್ಲಾಮಿನ ದೃಷ್ಟಿಕೋನದಲ್ಲಿ ಯಹೂದಿ ಮತ್ತು ಕ್ರೈಸ್ತ ಧರ್ಮಗಳು ಬೇರೆ ಬೇರೆ ಧರ್ಮಗಳಲ್ಲ. ಇಸ್ಲಾಮ್ ತನ್ನ ಅಂತಿಮ ಮತ್ತು ಪರಿಪೂರ್ಣ ರೂಪದಲ್ಲಿ ಪ್ರವಾದಿ ಮುಹಮ್ಮದ್(ಸ)* ಅವರ ಮೂಲಕ ಬರುವುದಕ್ಕೆ ಮುಂಚೆ ಇದೇ ಧರ್ಮದ ಪ್ರಚಾರ ಮತ್ತು ಸಂಸ್ಥಾಪನೆಗಾಗಿ ಎರಡು ಪ್ರತ್ಯೇಕ ಕಾಲ, ದೇಶ ಮತ್ತು ಜನಾಂಗಗಳಲ್ಲಿ ಇಬ್ಬರು ಮಹಾನ್ ಪ್ರವಾದಿಗಳಾದ ಹ. ಮೂಸಾ(ಅ)** ಮತ್ತು ಹ. ಈಸಾ(ಅ) ಬಂದಿದ್ದರು. ಆದರೆ ಅವರ ಅನುಯಾಯಿಗಳು ಅವರ ಮೂಲ ಶಿಕ್ಷಣವನ್ನು ತಿರುಚಿ ಅದರ ರೂಪವನ್ನೇ ಕೆಡಿಸಿ ಬಿಟ್ಟರು. ಕಾಲಕ್ರಮೇಣ ಹ.ಮೂಸಾರ(ಅ) ಅನುಯಾಯಿಗಳು ತಮ್ಮ ಧರ್ಮವನ್ನು ಯಹೂದಿ ಧರ್ಮವೆಂದೂ ಹ.ಈಸಾರ(ಅ) ಅನುಯಾಯಿಗಳು ತಮ್ಮ ಧರ್ಮವನ್ನು ಕ್ರೈಸ್ತ ಧರ್ಮವೆಂದೂ ಹೆಸರಿಸಿದರು.

ಈ ವಸ್ತುಸ್ಥಿತಿಯ ಹೊರತಾಗಿಯೂ ಮೂಲಭೂತ ವಿಶ್ವಾಸ ಮತ್ತು ಬೋಧನೆಗಳಲ್ಲಿ ಇಂದು ಇರುವ ಸ್ವರೂಪದಲ್ಲೇ ಅವು ಇತರ ಧರ್ಮಗಳಿಗಿಂತ ತೀರಾ ಭಿನ್ನವಾಗಿವೆ. ಹೀಗಿರುತ್ತಾ ಎಲ್ಲಾ ಧರ್ಮಗಳು ಸಮಾನವೆಂದು ಯಾವ ಬುದ್ಧಿವಂತನೂ ಹೇಳಲಾರ. ಈ ಧರ್ಮಗಳ ಮೂಲ ಗ್ರಂಥಗಳಾದ ಹಳೆಯ ಒಡಂಬಡಿಕೆ ಮತ್ತು ಹೊಸ ಒಡಂಬಡಿಕೆಯ ಪ್ರಕಾರ ಅವುಗಳಿಗೂ ಇತರ ಧರ್ಮಗಳಿಗೂ ಇರುವ ವ್ಯತ್ಯಾಸ ಸ್ಪಷ್ಟವಾಗಿ ಗೋಚರಿಸುತ್ತದೆ.

ಕ್ರೈಸ್ತರು ಈ ಎರಡ ಒಡಂಬಡಿಕೆಗಳನ್ನು ನಂಬುತ್ತಾರೆ. ಆದರೆ ಯಹೂದಿಗಳು ಕೇವಲ ಹಳೆಯ ಒಡಂಬಡಿಕೆಯನ್ನು ನಂಬುತ್ತಾರೆ. ಅವರ ಪ್ರಕಾರ ಸೃಷ್ಟಿಕರ್ತನಾದ ದೇವನಿಗೂ ವಂಶವಿದೆ. ಜತೆಗೆ ಅದು ಇಸ್ರೇಲರ ವಂಶ ಮೇಲ್ಮೆಯ ಮೇಲೆ ನಂಬಿಕೆಯಿಟ್ಟಿದೆ. ಅವರು ದೇವನನ್ನು ಇಸ್ರೇಲಿಗಳ ದೇವನೆನ್ನುತ್ತಾರೆ. ಇಸ್ರೇಲಿಗಳು ದೇವನ ಮೆಚ್ಚುಗೆಯವರು,

*(ಸ) ಎಂಬುದು 'ಸಲ್ಲಲ್ಲಾಹು ಅಲೈಹಿ ವಸಲ್ಲಮ್' (ಅವರ ಮೇಲೆ ಅಲ್ಲಾಹನ ಅನುಗ್ರಹ ಮತ್ತು ರಕ್ಷಣೆಯಿರಲಿ) ಎಂಬ ಪ್ರಾರ್ಥನೆಯನ್ನು ಸೂಚಿಸುತ್ತದೆ.

**(ಅ) ಎಂಬುದು 'ಅಲೈಹಿಸ್ಸಲಾಮ್' (ಅವರ ಮೇಲೆ ಶಾಂತಿಯಿರಲಿ) ಎಂಬ ಪ್ರಾರ್ಥನೆಯನ್ನು ಸೂಚಿಸುತ್ತದೆ.

ಆಪ್ತರು. ಆದ್ದರಿಂದ ಅವರಿಗೆ ನರಕಾಗ್ನಿಯಿಂದ ಮುಕ್ತಿಯಿದೆ ಎಂಬುದು ಕೂಡಾ ಅವರ ವಿಶ್ವಾಸವಾಗಿದೆ. ಇದರ ಪರಿಣಾಮವಾಗಿ ಯಹೂದಿ ಧರ್ಮಶಾಸ್ತ್ರದಲ್ಲಿ ಇಸ್ರೇಲಿಗಳು ಮತ್ತು ಇಸ್ರಾಈಲೇತರರ ಮಧ್ಯೆ ಸ್ಪಷ್ಟವಾದ ತಾರತಮ್ಯ ಮಾಡಲಾಗಿದೆ.

ಕ್ರೈಸ್ತ ವಿಶ್ವಾಸದ ಮೂಲಭೂತ ಅಂಶ 'ತ್ರಿಏಕತ್ವ' ಮತ್ತು ಪ್ರಾಯಶ್ಚಿತ್ತದ ನಂಬಿಕೆಯಾಗಿದೆ. ಸಂತ ಪೌಲ್ (ನಿಧನ ಕ್ರಿ.ಶ. 67) ಆಧುನಿಕ ಕ್ರೈಸ್ತ ಸಿದ್ಧಾಂತದ ಜನಕ ಆಗಿದ್ದಾರೆ. 'ತ್ರಿ ಏಕತ್ವ'ದ ವಿಶ್ವಾಸದ ಪ್ರಕಾರ ದೇವರು ಮೂವರು. ಏಸುಕ್ರಿಸ್ತ [ಹ.ಈಸಾ(ಅ)] ದೇವ ಪುತ್ರನಾಗಿದ್ದು ತಂದೆ, ಮಗ ಮತ್ತು ಪವಿತ್ರಾತ್ಮ ಸೇರಿಕೊಂಡು ದೇವತ್ವ ನಿರ್ಮಾಣವಾಗುತ್ತದೆ. ದೇವನೇ ತಂದೆ, ದೇವನೇ ಪುತ್ರ ಮತ್ತು ದೇವನೇ ಪವಿತ್ರಾತ್ಮನಾಗಿದ್ದಾನೆ. ಪ್ರಾಯಶ್ಚಿತ್ತದ ವಿಶ್ವಾಸದ ಪ್ರಕಾರ ಮನುಷ್ಯನು ಹುಟ್ಟು ಪಾಪಿಯಾಗಿರುವನು. ಹ. ಆದಮ್(ಅ) ಅವರು ನಿಷೇಧಿತ ವೃಕ್ಷದ ಫಲ ತಿನ್ನುವ ಮೂಲಕ ದೇವ ಕಾನೂನನ್ನು ಉಲ್ಲಂಘಿಸಿದರು. ಅದರ ಪರಿಣಾಮವಾಗಿ ಅವರನ್ನು ಸ್ವರ್ಗದಿಂದ ಧರೆಗೆ ಇಳಿಸಲಾಯಿತು. ಈಗ ಅವರ ವಂಶದಲ್ಲಿ ಹುಟ್ಟುವವರೆಲ್ಲರೂ ಅವರನ್ನೇ ಅನುಸರಿಸುವವರು. ದೇವಪುತ್ರನಾದ ಏಸುಕ್ರಿಸ್ತನ ಹೊರತು ಎಲ್ಲರೂ ಪಾಪಿಗಳಾಗಿದ್ದಾರೆ. ಏಕೆಂದರೆ ಅವರು ಆದಮನ ಸಂತತಿಗಳಾಗಿದ್ದು ಆದಮನ ಸಂತತಿಗಳೆಲ್ಲಾ ಪಾಪಿಗಳಾಗಿದ್ದಾರೆ. ದೇವಪುತ್ರ ಏಸುಕ್ರಿಸ್ತರು ಮನುಷ್ಯ ವೀರ್ಯದಿಂದ ಜನಿಸಲಿಲ್ಲ. ಪುರುಷ ಸಹವಾಸದ ಹೊರತೇ ಅವರ ತಾಯಿ ಮರ್ಯಮ್(ಅ) ಗರ್ಭ ಧರಿಸಿದರು. ತನ್ಮೂಲಕ ಮಗು ಆದಮರ ಪಾಪದಲ್ಲಿ ಭಾಗೀದಾರನಾಗಲಿಲ್ಲ. ಹೀಗೆ ಸೃಷ್ಟಿಯಾದ ದೇವಪುತ್ರನು ಮಾನವಕುಲದ ಪಾಪಗಳಿಗೆ ಪ್ರಾಯಶ್ಚಿತ್ತವಾಗಿದ್ದಾರೆ. ಆದ್ದರಿಂದ ಯಾರು ಹುಟ್ಟು ಪಾಪದಿಂದ ಮುಕ್ತರಾಗ ಬಯಸುತ್ತಾರೋ ಅವರು ಏಸುಕ್ರಿಸ್ತರನ್ನು ದೇವಪುತ್ರನೆಂದು ನಂಬಬೇಕು. ಏಕೆಂದರೆ ಏಸುಕ್ರಿಸ್ತರು ಎಲ್ಲ ಮನುಷ್ಯರ ಪಾಪಗಳನ್ನು ಹೊತ್ತು ಪ್ರಾಯಶ್ಚಿತ್ತದ ರೂಪದಲ್ಲಿ ಶಿಲುಬೆಗೇರಿದರು. ಸ್ವತಃ ಪಾಪ ಮುಕ್ತರಾಗಿದ್ದುಕೊಂಡು ಕೂಡಾ ಮಾನವನ ಪಾಪಗಳ ಪ್ರಾಯಶ್ಚಿತ್ತಕ್ಕಾಗಿ ಮರಣದ ವೇದನೆಯನ್ನು ಅನುಭವಿಸಿದರು.

ಏಸುಕ್ರಿಸ್ತರ ದೇವತ್ವ ಮತ್ತು ಪ್ರಾಯಶ್ಚಿತ್ತದ ಈ ವಿಶ್ವಾಸವು ಕ್ರೈಸ್ತರನ್ನು ಯಹೂದಿಗಳಂತೆ ಆಯ್ದ ಜನತೆಯಾಗಿ ಮಾಡುತ್ತದೆ. ಅವರಿಗೆ ದೇವರ ವತಿಯಿಂದ ನರಕದ ಶಿಕ್ಷೆ ಸಿಗುವ ಪ್ರಮೇಯವೇ ಈ ನಂಬಿಕೆಯಲ್ಲಿಲ್ಲ.

ಯಹೂದಿತ್ವ ಮತ್ತು ಕ್ರೈಸ್ತ ಧರ್ಮದ ಮಧ್ಯೆ ಎಷ್ಟೊಂದು ಅಂತರವಿದೆಯೆಂದರೆ ಯಹೂದಿಗಳ ಪವಿತ್ರ ಗ್ರಂಥ 'ತಲ್ಮೂದ್' ಕ್ರೈಸ್ತರ ದೇವರಾದ ಏಸುಕ್ರಿಸ್ತರನ್ನು ಹೆಡ್ಡ, ಕುಷ್ಠರೋಗ ಪೀಡಿತ, ಇಸ್ರೇಲಿಗಳನ್ನು ವಂಚಿಸಿದವನು, ಜಾರ ಸಂತಾನ, ಮಾಂತ್ರಿಕ ಮತ್ತು ದೊಡ್ಡ ಅಪರಾಧಿ ಎಂದು ಸಾರುತ್ತದೆ. ಅದೇ ರೀತಿ ಈ ಗ್ರಂಥವು ಏಸುಕ್ರಿಸ್ತರ ಅನುಯಾಯಿಗಳನ್ನು ನಾಸ್ತಿಕರೆಂದೂ ಹೊಸ ಒಡಂಬಡಿಕೆಯನ್ನು ಪಾಪಗಳಿಂದ ತುಂಬಿದ ಗ್ರಂಥವೆಂದೂ ಸಾರುತ್ತದೆ.

❑

ಧರ್ಮಗಳ ಸಮಾನತೆಯ ಸಿದ್ಧಾಂತ

ಗುರಿ ಒಂದಾಗಿದ್ದರೆ ಮಾರ್ಗಗಳ ಭಿನ್ನತೆಯಿಂದ ಯಾವುದೇ ವ್ಯತ್ಯಾಸವಾಗು ವುದಿಲ್ಲ. ಎಲ್ಲ ಧರ್ಮಗಳೂ ಸತ್ಯವಾಗಿವೆ. ಎಲ್ಲ ಧರ್ಮಗಳಲ್ಲಿಯೂ ಸತ್ಯ, ನ್ಯಾಯ, ಸಮಾಜ ಸೇವೆ, ಮಾನವ ಪ್ರೇಮ ಮತ್ತು ಮಾನವ ಸೋದರತೆಯನ್ನು ಬೋಧಿಸಲಾಗಿದೆ. ಆದ್ದರಿಂದ ಎಲ್ಲರೂ ಎಲ್ಲ ಧರ್ಮವನ್ನು ಸಮಾನವಾಗಿ ಗೌರವಿಸಬೇಕು. ಸತ್ಯ ಧರ್ಮವು ತಮ್ಮದು ಮಾತ್ರ. ಪರಲೋಕ ಮೋಕ್ಷವು ಈ ಧರ್ಮದ ಅನುಸರಣೆಯಿಂದ ಮಾತ್ರ ಗಳಿಸಬಹುದು ಎಂಬ ಭಾವನೆಯು ಒಂದು ಸಂಕುಚಿತ ಭಾವನೆ ಮತ್ತು ಕಠೋರ ನಿಲುಮೆಯಾಗಿದೆ. ಇದರಿಂದ ವಿಭಿನ್ನ ಧರ್ಮಗಳ ಮಧ್ಯೆ ಅನಗತ್ಯ ಸಂಘರ್ಷ ಉಂಟಾಗುತ್ತದೆ. ವಿಭಿನ್ನ ಧರ್ಮಾನುಯಾಯಿಗಳ ಮಧ್ಯೆ ಶಾಂತಿಯುತ ಸಹಬಾಳ್ವೆಯ ಮಹಾನ್ ಧ್ಯೇಯಕ್ಕೆ ಧಕ್ಕೆ ಉಂಟಾಗುತ್ತದೆ. ಭಾರತದಂತಹ ಬಹು ಭಾಷೀಯ ಮತ್ತು ಬಹು ಧರ್ಮೀಯ ರಾಷ್ಟ್ರಗಳಲ್ಲಿ ಧಾರ್ಮಿಕ ಸಂಕುಚಿತತೆಯ ಮಾರ್ಗವನ್ನು ಬಿಟ್ಟು, ಸರ್ವಧರ್ಮ ಸಮಭಾವವನ್ನು ಅಂಗೀಕರಿಸುವುದೇ ಬುದ್ಧಿವಂತಿಕೆಯ ಮಾರ್ಗವಾಗಿದೆ. ಎಲ್ಲ ಧರ್ಮಗಳ ಮೂಲ ಒಬ್ಬನೇ ದೇವನಾಗಿದ್ದಾನೆ. ಆತನನ್ನು ಖುದಾ, ಭಗವಾನ್, ಗಾಡ್‌ನಂತಹ ವಿಭಿನ್ನ ಹೆಸರಿನಿಂದ ಕರೆಯಲಾಗುತ್ತದೆ. ವಿಭಿನ್ನ ಧರ್ಮಗಳು ಆ ದೇವರನ್ನು ಪೂಜಿಸುವ ಮತ್ತು ಅವನನ್ನು ಮೆಚ್ಚಿಸುವ ವಿಭಿನ್ನ ವಿಧಾನಗಳಾಗಿವೆ. 'ಧರ್ಮಗಳ ಸಮಾನತೆ'ಯ ಈ ಸಿದ್ಧಾಂತವೇ ಭಾರತದ ಏಕೈಕ ಮುಕ್ತಿ ಮಾರ್ಗ. ಇತರ ಎಲ್ಲ ಮಾರ್ಗ ಗಳೂ ಭಿನ್ನತೆ ಮತ್ತು ಸಂಘರ್ಷದ ಮಾರ್ಗವಾಗಿವೆ. ಅದು ದೇಶಕ್ಕೂ ದೇಶ ವಾಸಿಗಳಿಗೂ ವಿನಾಶಕಾರಿಯಾಗಿದೆ. ದೇಶದ ಪ್ರತಿಯೊಬ್ಬ ವಿಚಾರವಂತ ಪ್ರಜೆಯು ಅದರಿಂದ ದೂರವಿರಬೇಕು.

ಇದು ಇಂದು ಭಾರತದ ಎಲ್ಲೆಡೆ ವ್ಯಾಪಿಸಿರುವ "ಧರ್ಮಗಳ ಸಮಾನತೆಯ ಸಿದ್ಧಾಂತ"ದ ಸಾರಾಂಶ. ಈ ಸಿದ್ಧಾಂತವು ಮೂಲತಃ ಸ್ವತಂತ್ರ ಭಾರತದ ರಾಜಕೀಯ ಪರಿಸ್ಥಿತಿಯ ಕೂಸಾಗಿದೆ. ಸ್ವಾತಂತ್ರ್ಯ ಹೋರಾಟದ ಪರಿಣಾಮವಾಗಿ ಬ್ರಿಟಿಷ್ ಸಾಮ್ರಾಜ್ಯ ಶಾಹಿಯಿಂದ ಮುಕ್ತಿ ಪಡೆದ ಬಳಿಕ ದೇಶದ ಆಡಳಿತವು ಪ್ರಜೆಗಳ ಕೈಗೆ ಬಂತು. ಹಿಂದೂ-ಮುಸ್ಲಿಮರು ಈ ಆಡಳಿತದ ಪ್ರಮುಖ ಪಾಲುದಾರರಾಗಿದ್ದರು. ಆದ್ದರಿಂದ ದೇಶಕ್ಕೆ ಒಂದು 'ಜಾತ್ಯತೀತ ವ್ಯವಸ್ಥೆ'ಯನ್ನು ನೆಚ್ಚಿಕೊಳ್ಳಲಾಯಿತು. ಇದರ ಪ್ರಕಾರ ಸರಕಾರದ ಮಟ್ಟಿಗೆ ದೇಶದ ಎಲ್ಲ ಧರ್ಮಗಳೂ ಸಮಾನ ಆದರಕ್ಕೆ ಪಾತ್ರರಾದವು. ಆದರೆ ಆಡಳಿತ

ಕಾರ್ಯದಲ್ಲಿ ಯಾವುದೇ ಧರ್ಮದ ಹಸ್ತಕ್ಷೇಪಕ್ಕೂ ಅವಕಾಶವಿರಲಿಲ್ಲ. ಈ ಜಾತ್ಯತೀತತೆಯ ಸಿದ್ಧಾಂತವನ್ನು ಆಡಳಿತಾರೂಢರು ಪ್ರಚಾರ ಪಡಿಸತೊಡಗಿದರು.

ಧರ್ಮಗಳಲ್ಲಿರುವ ಸಮಾನ ಅಂಶಗಳು

ಜಗತ್ತಿನ ಧರ್ಮಗಳ ಮಧ್ಯೆ ಇರುವ ಮೂಲಭೂತ ಭಿನ್ನತೆಗಳ ಹೊರತಾಗಿಯೂ ಅವುಗಳಲ್ಲಿ ಹಲವು ಸಮಾನ ಅಂಶಗಳೂ ಇವೆ ಎಂಬುದು ಒಂದು ವಾಸ್ತವಿಕತೆಯಾಗಿದೆ. ಆದರೆ ಆ ಸಮಾನ ಅಂಶಗಳು ಕೇವಲ ಆಂಶಿಕವಾಗಿದ್ದು ಅವುಗಳ ಆಧಾರದಲ್ಲಿ ಎಲ್ಲ ಧರ್ಮಗಳೂ ಸಮಾನವೆನ್ನಲು ಸಾಧ್ಯವಿಲ್ಲ. ಏಕೆಂದರೆ ಯಾವುದೇ ಧರ್ಮದ ಮೂಲ ವಾಸ್ತವಿಕತೆ, ಅದರ ಒಟ್ಟು ಸ್ವರೂಪ ಮತ್ತು ಅದರ ಮೂಲಭೂತ ರಚನೆಯಾಗಿದೆ. ಇವುಗಳ ಆಧಾರದಲ್ಲಿ ಧರ್ಮಗಳ ಮಧ್ಯೆ ಎಷ್ಟು ದೊಡ್ಡ ಅಂತರವಿದೆ ಎಂಬುದನ್ನು ಈಗಾಗಲೇ ಚರ್ಚಿಸಲಾಗಿದೆ. ಈ ಮೂಲಭೂತ ಭಿನ್ನತೆಯ ಹೊರತಾಗಿಯೂ ಕೆಲವು ಆಂಶಿಕ ವಿಷಯ ಗಳಲ್ಲಿರುವ ಏಕತೆಯ ಆಧಾರದಲ್ಲಿ ಅವುಗಳೆಲ್ಲಾ ಸಮಾನವಾಗಿ ಮುಕ್ತಿಯ ಮಾರ್ಗಗಳಾಗಿವೆ ಎನ್ನುವುದು ಅತ್ಯಂತ ಬಾಲಿಶವಾಗುವುದು.

ಧರ್ಮದ ಸೀಮಿತ ಅಧ್ಯಯನ

ಈ ಸಿದ್ಧಾಂತವು ಧರ್ಮಗಳ ಅತ್ಯಂತ ಸೀಮಿತ ಅಧ್ಯಯನದ ಪರಿಣಾಮವಾಗಿದೆ. ಧರ್ಮಗಳಲ್ಲಿ ಅವುಗಳ ವಿಶ್ವಾಸ-ಶ್ರದ್ಧೆಗಳು, ಮೂಲ ಕಲ್ಪನೆಗಳು ಮತ್ತು ಸಿದ್ಧಾಂತಗಳಿಗೆ ಮೂಲಭೂತ ಸ್ಥಾನವಿದೆ. ಈ ವಿಶ್ವಾಸ-ಕಲ್ಪನೆಗಳನ್ನು ಕಡೆಗಣಿಸಿ ಕೇವಲ ಆಂಶಿಕ ಮತ್ತು ಅಮುಖ್ಯ ಬೋಧನೆಗಳ ಬಾಹ್ಯ ಸಮಾನತೆಯನ್ನು ನೋಡಿ ಎಲ್ಲ ಧರ್ಮಗಳ ಮೂಲ ಮತ್ತು ವಾಸ್ತವಿಕತೆ ಒಂದಾಗಿದೆ ಎಂಬ ತೀರ್ಮಾನಕ್ಕೆ ಬರುವುದು ಸರಿಯಲ್ಲ. ಧರ್ಮಗಳ ಸೀಮಿತ ಅಧ್ಯಯನವು 'ಧರ್ಮಗಳ ಸಮಾನತೆ'ಯ ಸಮಸ್ಯೆಯನ್ನು ಅರ್ಥಮಾಡಿಕೊಳ್ಳಲು ಖಂಡಿತ ಪರ್ಯಾಪ್ತವಲ್ಲ. ವಿಭಿನ್ನ ಧರ್ಮಗಳಲ್ಲಿ ಎಷ್ಟರ ಮಟ್ಟಿಗೆ ಸಮಾನತೆಯಿದೆ? ಅವುಗಳ ಮೂಲಭೂತ ಭಿನ್ನತೆಗಳೇನು? ಈ ಭಿನ್ನತೆಗಳಿರುತ್ತಾ ಎಲ್ಲ ಧರ್ಮಗಳು ಸಮಾನವೆನ್ನುವುದು ಆತ್ಮ ವಂಚನೆಯಾಗಲಾರದೇ ಎಂಬಿತ್ಯಾದಿ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಬೇಕಾದರೆ ಆ ಧರ್ಮಗಳ ಮೂಲಭೂತ ತತ್ವಗಳು ಮತ್ತು ಅವುಗಳಲ್ಲಿರುವ ಸಮಾನ ಮತ್ತು ಅಸಮಾನ ಅಂಶಗಳ ಅಧ್ಯಯನ ನಡೆಸಬೇಕಾದುದು ಅಗತ್ಯ..

ಧರ್ಮಗಳ ತಾತ್ವಿಕ ಭಿನ್ನತೆ

ಹಿಂದೂ ಧರ್ಮವು ಬಹುದೇವಾರಾಧನೆ ಮತ್ತು ಮೂರ್ತಿ ಪೂಜೆಯ ಧರ್ಮವಾಗಿದೆ. ಅದ್ವೈತ ವಾದವು ಅದರ ನರ ನಾಡಿಗಳಲ್ಲಿ ಚಲಿಸುತ್ತಿದೆ. ಪ್ರವಾದಿತ್ವದ ಯಾವ ಕಲ್ಪನೆಯೂ ಅದರಲ್ಲಿಲ್ಲ. ದೇವ ಕಲ್ಪನೆಯು ಧರ್ಮಗಳ ಜೀವಾಳವಾಗಿದೆ. ಈಗಿರುವ ಬೌದ್ಧ ಮತವು ದೇವನ ಕಲ್ಪನೆಯನ್ನೇ ಹೊಂದಿಲ್ಲ. ಜೈನ ಧರ್ಮವೂ ದೇವನನ್ನು ನಿರಾಕರಿಸುತ್ತದೆ. ಸಿಕ್ಖ್ ಧರ್ಮದಲ್ಲಿ ಅವರ ಗುರುಗಳಿಗೆ ದೇವತ್ವದ ಸ್ಥಾನವನ್ನು ನೀಡಲಾಗಿದೆ. ಯಹೂದಿಗಳು ಮತ್ತು ಕ್ರೈಸ್ತರು ತಮ್ಮನ್ನು ದೇವರ ಮಕ್ಕಳು ಮತ್ತು ಅವನ ಪ್ರೀತಿಪಾತ್ರರೆಂದು ಬಗೆಯುತ್ತಾರೆ.

ಇಸ್ಲಾಮ್ ಧರ್ಮವು ಪ್ರವಾದಿ ಮುಹಮ್ಮದ್(ಸ) ಅವರನ್ನು ಅಲ್ಲಾಹನ ಅಂತಿಮ ಪ್ರವಾದಿಯೆಂದು ಸಾರುತ್ತದೆ. ಅವರ ನಂತರ ಇನ್ನು ಪ್ರಳಯದ ತನಕ ಯಾವ ಪ್ರವಾದಿಯೂ ಬರಲಿಕ್ಕಿಲ್ಲ. ಬಹುದೇವಾರಾಧನೆ ಮತ್ತು ಮೂರ್ತಿಪೂಜೆಯ ಕಲ್ಪನೆಯೂ ಅದಕ್ಕೆ ಸ್ವೀಕಾರಾರ್ಹವಲ್ಲ. ಇಸ್ಲಾಮಿನ ಪವಿತ್ರ ಗ್ರಂಥವಾದ ಕುರ್‌ಆನಿನಲ್ಲಿ ದೇವನು ಎಂದೆಂದಿಗೂ ಬಹುದೇವಾರಾಧನೆ ಮತ್ತು ಮೂರ್ತಿಪೂಜೆಯನ್ನು ಕ್ಷಮಿಸಲಾರನು ಎನ್ನಲಾಗಿದೆ. ಅದರ ಪ್ರಕಾರ ಅಲ್ಲಾಹನ ಬಳಿ ಸ್ವೀಕಾರಾರ್ಹವಲ್ಲದ ಯಾವ ಧರ್ಮವನ್ನು ಅನುಸರಿಸಿದರೂ ಅವನಿಗೆ ದೇವ ಸಂಪ್ರೀತಿಯಾಗಲೀ ಪರಲೋಕ ಮೋಕ್ಷವಾಗಲಿ ಖಂಡಿತ ಸಿಗಲಾರದು.

ಧರ್ಮಗಳ ಆದರದ ತಾತ್ಪರ್ಯ ಯಾವುದೇ ಧರ್ಮವನ್ನು ಹೀಯಾಳಿಸದಿರುವುದು ಮತ್ತು ಅದರ ಗೌರವಾನ್ವಿತ ವ್ಯಕ್ತಿಗಳ ಬಗ್ಗೆ ತಿರಸ್ಕಾರದ ಧೋರಣೆಯನ್ನು ತಳೆಯದಿರುವುದು ಎಂದಾಗಿದ್ದರೆ ಇಸ್ಲಾಮ್ ಅದನ್ನು ಬಲವಾಗಿ ಪ್ರತಿಪಾದಿಸುತ್ತದೆ. ಒಂದು ವೇಳೆ ಧರ್ಮಗಳ ಸಮಾನ ಆದರದ ತಾತ್ಪರ್ಯವು ಲೋಕದ ಎಲ್ಲ ಧರ್ಮಗಳನ್ನೂ ಸತ್ಯವೆಂದೂ ಪ್ರಶ್ನಾತೀತವೆಂದೂ ಅವುಗಳ ಪರಸ್ಪರ ವಿರುದ್ಧವಾಗಿರುವ ವಿಶ್ವಾಸ-ಶ್ರದ್ಧೆಗಳನ್ನು ಸರಿಯೆಂದು ಯಾವುದೇ ಆಯ್ಕೆ ಮತ್ತು ಪ್ರಾಶಸ್ತ್ಯವಿಲ್ಲದೆ ಪ್ರತಿಯೊಂದು ಧರ್ಮವು ಸ್ವೀಕಾರಾರ್ಹವೆಂದೂ ದೇವ ಸಂಪ್ರೀತಿಯನ್ನು ಗಳಿಸುವ ಸಮಾನ ಮಾಧ್ಯಮವೆಂದೂ ಆಗಿದ್ದರೆ ಇಸ್ಲಾಮ್ ಧರ್ಮ ಮಾತ್ರವಲ್ಲ ಹಿಂದೂ ಧರ್ಮದ ಹೊರತು ಬೇರೆಲ್ಲ ಧರ್ಮಗಳೂ ಸಾರಾಸಗಟಾಗಿ ಅದನ್ನು ನಿರಾಕರಿಸುತ್ತವೆ.

ಕ್ರೈಸ್ತರು ಏಸುಕ್ರಿಸ್ತರನ್ನು ದೇವಪುತ್ರನೆಂದು ಸಾರುತ್ತಾರೆ. ಮನುಷ್ಯನು ಹುಟ್ಟು ಪಾಪಿಯಾಗಿದ್ದಾನೆಂಬುದು ಅವರ ನಂಬಿಕೆ. ಈ ಪಾಪದಿಂದ ಮುಕ್ತಿ ಪಡೆಯಲು ದೇವ ಪುತ್ರನು ತನ್ನ ಪ್ರಾಣವನ್ನು ಬಲಿ ನೀಡುವ ಮೂಲಕ ತನ್ನ ಅನುಯಾಯಿಗಳ ಮೋಕ್ಷಕ್ಕೆ ಹೇತುವಾದನು. ಯಾವ ಮನುಷ್ಯನು ತನ್ನನ್ನು ಈ ಪಾಪದಿಂದ ಮುಕ್ತಗೊಳಿಸ ಬಯಸುತ್ತಾನೋ ಅವನು ಏಸುಕ್ರಿಸ್ತನ ಅನುಯಾಯಿಯಾಗಲೇ ಬೇಕು. 'ಸರ್ವಧರ್ಮ ಸಮಭಾವ'ದ ಈ ಸಿದ್ಧಾಂತವು ಅವರಿಗೆ ಸ್ವೀಕಾರಾರ್ಹವಾಗಿದ್ದರೆ ಲೋಕದಾದ್ಯಂತ ಅವರು ನಡೆಸುತ್ತಿರುವ ಅವರ ಎಲ್ಲ ಮಿಶನರಿ ಚಟುವಟಿಕೆಗಳು ನಿರರ್ಥಕವೆನಿಸುವುದು. ನಿಜವಾಗಿ 'ಸರ್ವಧರ್ಮ ಸಮಭಾವ'ದ ವಕ್ತಾರರಾದ ಹಿಂದೂಗಳು ಕೂಡಾ ಇದನ್ನು ಸರಿಯೆಂದು ಮನಸಾರೆ ಒಪ್ಪುವುದಿಲ್ಲ. ಎಲ್ಲ ಧರ್ಮಗಳೂ ಸರಿಯಾಗಿದ್ದರೆ, ಯಾವ ಧರ್ಮವನ್ನು ಅಳವಡಿಸಿದರೂ ಮೋಕ್ಷ ಸಿಗುವುದು ಖಂಡಿತ ಎಂದಾದರೆ ಬೌದ್ಧ ಧರ್ಮದ ವಿರುದ್ಧ ಯುದ್ಧ ಸಾರಿ ಅದನ್ನು ಗಡೀಪಾರು ಮಾಡುವ ಅಗತ್ಯವಾದರೂ ಏನಿತ್ತು? ಮತಾಂತರದ ಬಗ್ಗೆ ಈ ರೀತಿ ಗುಲ್ಲೆಬ್ಬಿಸುವ ಅವಶ್ಯಕತೆ ಏನಿತ್ತು?

ಧರ್ಮಗಳ ತಪ್ಪಾದ ಕಲ್ಪನೆ

ಎಲ್ಲ ಧರ್ಮಗಳೂ ಸತ್ಯವಾಗಿದ್ದು ಯಾವುದೇ ಧರ್ಮದ ಅನುಸರಣೆಯಿಂದ ದೇವ ಸಂಪ್ರೀತಿಯನ್ನೂ ಮುಕ್ತಿಯನ್ನೂ ಸಮಾನವಾಗಿ ಗಳಿಸಬಹುದೆಂಬ ಹಿಂದೂ ಧರ್ಮದ ಪ್ರತಿಪಾದನೆಯು ನಿಜವಾಗಿ ಆಧುನಿಕ ಯುಗದಲ್ಲಿ ಧರ್ಮದ ಕುರಿತು ಜನರಿಗೆ ಇರುವ ಅಸಡ್ಡೆ, ನಿರ್ಲಕ್ಷ್ಯ, ನಿರಾಸಕ್ತಿ ಮತ್ತು ಹಗುರ ಭಾವನೆಯ ಸ್ಪಷ್ಟ ಪ್ರತೀಕವಾಗಿದೆ. ವಾಸ್ತವದಲ್ಲಿ ನೈಜ ಧರ್ಮವನ್ನು ಗುರುತಿಸುವುದು ಜೀವನದ ಅತ್ಯಂತ ಗಂಭೀರ ಸಮಸ್ಯೆಯಾಗಿದೆ. ಏಕೆಂದರೆ ಅದರ ಸರಿ ಅಥವಾ ತಪ್ಪಾದ ಆಯ್ಕೆಯ ಮೇಲೆ ಕೇವಲ

ಇಹಲೋಕದ ಮಾತ್ರವಲ್ಲ ಪರಲೋಕದ ಶಾಶ್ವತ ಜೀವನದ ಯಶಸ್ಸು ಮತ್ತು ವೈಫಲ್ಯವು ಅವಲಂಬಿಸಿದೆ. ಬಾಹ್ಯ ನೋಟಕ್ಕೆ ಅತ್ಯಂತ ಸರಳ ಮತ್ತು ನಿರುಪದ್ರವಿಯಾಗಿ ಕಂಡು ಬರುವ 'ಸರ್ವಧರ್ಮ ಸಮಾನತೆ'ಯ ಈ ಸಿದ್ಧಾಂತವನ್ನು ಆಳವಾಗಿ ಅಭ್ಯಸಿಸಿ ಅದರ ಪರಿಣಾಮಗಳ ವಿಶ್ಲೇಷಣೆ ನಡೆಸಿದರೆ ಅದು ಅತ್ಯಂತ ಅಪಾಯಕಾರಿ ಮತ್ತು ಭಯಾನಕವಾಗಿ ಕಂಡು ಬರುತ್ತದೆ. ಏಕೆಂದರೆ ಈ ಸಿದ್ಧಾಂತವನ್ನು ಒಪ್ಪಿಕೊಂಡರೆ ಅಖಿಲ ವಿಶ್ವ ಮತ್ತು ಅದರಲ್ಲಿರುವ ಅದ್ಭುತ ಸೃಷ್ಟಿಯಾದ ಮಾನವನು ಯಾವುದೇ ಪ್ರಜ್ಞಾವಂತ ಮತ್ತು ಇಚ್ಛಾಶಕ್ತಿಯುಳ್ಳ ಅಸ್ತಿತ್ವದ ಚಮತ್ಕಾರವಾಗಿರದೆ ಕೇವಲ ಓರ್ವ ಆಟಗಾರನ ಆಟಿಕೆ ಎನಿಸುವನು. ಅವನ ಆದಿ-ಅಂತ್ಯಗಳಿಗೆ ಯಾವ ಧ್ಯೇಯವೂ ಇಲ್ಲ. ಅವನ ಸೃಷ್ಟಿಯ ಹಿಂದೆ ಯಾವುದೇ ಪೂರ್ವನಿರ್ಧರಿತ ಯೋಜನೆ ಇಲ್ಲ. ಈ ವಿಶ್ವದ ಸೃಷ್ಟಿಯು ಕೇವಲ ಒಂದು ಆಕಸ್ಮಿಕವಾಗಿದೆ ಮತ್ತು ಆಕಸ್ಮಿಕವಾಗಿಯೇ ಅದು ನಡೆಯುತ್ತಲೂ ಇದೆ. ಅದರಲ್ಲಿರುವ ಅತ್ಯಂತ ಜವಾಬ್ದಾರಿಯುತ ಸೃಷ್ಟಿಯಾದ ಮಾನವನಿಗೆ ನೆಲ - ಜಲಗಳ ಮೇಲೆ ಆಧಿಪತ್ಯವಿದ್ದಾಗಲೂ ಗಾಳಿ, ಮಳೆ, ಆಕಾಶ, ಸೂರ್ಯ, ಚಂದ್ರಗಳು ಅಹರ್ನಿಶಿ ಅವನ ಸೇವೆಯಲ್ಲಿ ನಿರತವಾಗಿದ್ದರೂ, ಅವನ ಸೃಷ್ಟಿಯ ಹಿಂದೆ ಯಾವುದೇ ವಿಶೇಷ ಧ್ಯೇಯವಿಲ್ಲ. ಎಲ್ಲ ಸೃಷ್ಟಿಗಳ ಪೈಕಿ ಬುದ್ಧಿ, ವಿವೇಕ, ನಿರ್ಧಾರ ಶಕ್ತಿ, ಇಚ್ಛಾ ಶಕ್ತಿ ಹಾಗೂ ಒಳಿತು-ಕೆಡುಕುಗಳ ಆಯ್ಕೆಯ ಸ್ವಾತಂತ್ರ್ಯ ಪಡೆದ ಏಕೈಕ ಸೃಷ್ಟಿಯಾಗಿದ್ದೂ ಮಾನವನು ತನ್ನ ಜೀವನಕ್ಕೆ ಯಾವುದೇ ಜೀವನ ಕ್ರಮವನ್ನು ಪಾಲಿಸಬೇಕಾಗಿಲ್ಲ. ಮನುಷ್ಯನು ತನ್ನ ಜೀವನದಲ್ಲಿ ತನ್ನಿಚ್ಛೆಯಂತೆ ಒಬ್ಬ ದೇವನ ದಾಸ್ಯದ ಮಾರ್ಗವನ್ನಾಗಲಿ ಅನೇಕ ದೇವರುಗಳ ದಾಸ್ಯದ ಮಾರ್ಗವನ್ನಾಗಲಿ ಸಮಾನ ಸಂತೃಪ್ತಿಯೊಂದಿಗೆ ಕೈಗೊಳ್ಳಬಹುದಾಗಿದೆ. ಅದೇ ರೀತಿ ದೇವನನ್ನು ಸಂಪೂರ್ಣವಾಗಿ ನಿರಾಕರಿಸುವ ಸ್ವಾತಂತ್ರ್ಯವೂ ಅವನಿಗಿದೆ. ಈ ಸಿದ್ಧಾಂತದ ಆಧಾರದಲ್ಲಿ ಒಂದೋ ಈ ವಿಶ್ವಕ್ಕೆ ಯಾರೂ ಸೃಷ್ಟಿಕರ್ತರಿಲ್ಲ. ಒಂದು ವೇಳೆ ಇದ್ದರೂ ಅವನಿಗೆ ತನ್ನ ಸೃಷ್ಟಿಯಲ್ಲೇ ವಿಶಿಷ್ಟವಾದ ಮಾನವರು ಯಾರನ್ನು ಪೂಜಿಸುತ್ತಾರೆ, ಯಾರನ್ನು ಅನುಸರಿಸುತ್ತಾರೆ, ಯಾರ ದಾಸ್ಯವನ್ನು ಕೈಗೊಳ್ಳುತ್ತಾರೆ ಎಂಬ ಬಗ್ಗೆ ಯಾವುದೇ ಪರಿವೆಯಿಲ್ಲ. ಅವೆಲ್ಲವೂ ಅವನ ಮಟ್ಟಿಗೆ ಸಮಾನವಾಗಿವೆ. ಎಲ್ಲವನ್ನೂ ಅವನು ಸಮಾನವಾಗಿ ಮೆಚ್ಚುತ್ತಾನೆ. ಅವನು ಈ ವಿಶ್ವವನ್ನು ಯಾವುದೇ ಉದ್ದೇಶವಿಲ್ಲದೆ ಸೃಷ್ಟಿಸಿರುವನು. ಮನುಷ್ಯನನ್ನು ಅವನು ಇಚ್ಛಾ ಸ್ವಾತಂತ್ರ್ಯ ನೀಡಿ ಸೃಷ್ಟಿಸಿದ್ದರೂ ಅವನ ಬಗ್ಗೆ ಸೃಷ್ಟಿಕರ್ತನಿಗೆ ಯಾವುದೇ ಬದ್ಧತೆ (Commitment) ಇಲ್ಲ. ವಿಶ್ವವನ್ನು ಅವನು ಆಕಸ್ಮಿಕ ರೀತಿಯಲ್ಲಿ ನಡೆಸುತ್ತಿರುವನು. ಅದೇ ರೀತಿ ಮನುಷ್ಯನಿಗೆ ತನ್ನಿಷ್ಟದಂತೆ ಜೀವಿಸುವ ಪೂರ್ಣ ಸ್ವಾತಂತ್ರ್ಯ ನೀಡಿರುವನು. ಯಾವುದೇ ವಿಶಿಷ್ಟ ಜೀವನ ಕ್ರಮವನ್ನು ಅವನು ಆತನಿಗಾಗಿ ಗೊತ್ತುಪಡಿಸಲಿಲ್ಲ. ಜೀವನದ ಬಗ್ಗೆ ಯಾವುದೇ ವಿಶಿಷ್ಟ ಪರಿಕಲ್ಪನೆ ಮತ್ತು ಸಿದ್ಧಾಂತವನ್ನು ಅವನು ಸ್ವೀಕಾರಾರ್ಹವೆಂದು ನಿರ್ಧರಿಸಿಲ್ಲ. ಈ ವಿಶ್ವಕ್ಕೆ ಗೊತ್ತು ಗುರಿಯಿಲ್ಲದಂತೆ ಮನುಷ್ಯನೂ ಗೊತ್ತು ಗುರಿಯಿಲ್ಲದವನಾಗಿದ್ದಾನೆ. ತನಗಾಗಿ ಯಾವ ಧ್ಯೇಯವನ್ನಾದರೂ ಅವನು ಗೊತ್ತುಪಡಿಸಿಕೊಳ್ಳಬಹುದು. ವಿಶ್ವದ ಸೃಷ್ಟಿಕರ್ತನು ಯಾವುದೇ ಜೀವನ ಸಿದ್ಧಾಂತದ ಅನುಸರಣೆಯನ್ನು ಅವನಿಗೆ ಕಡ್ಡಾಯಗೊಳಿಸಿಲ್ಲ.

ಇವು 'ಸರ್ವಧರ್ಮ ಸಮಾನತೆಯ ಸಿದ್ಧಾಂತದ ಅನಿವಾರ್ಯ ಪರಿಣಾಮವಾಗಿವೆ. ಈ ಪೈಕಿ ಪ್ರತಿಯೊಂದನ್ನೂ ಇಸ್ಲಾಮ್ ಧರ್ಮವು ಸ್ಪಷ್ಟವಾಗಿ ನಿರಾಕರಿಸುತ್ತದೆ. ಇಸ್ಲಾಮಿನ ಪ್ರಕಾರ ಈ ವಿಶ್ವವು ಒಂದು ಮಹಾನ್ ಧ್ಯೇಯಕ್ಕಾಗಿ ಸೃಷ್ಟಿಸಲ್ಪಟ್ಟಿದೆ. ವಿಶ್ವದೊಡೆಯನು ಮಾನವಕುಲದ ಆರಂಭದಿಂದಲೇ ಅವನ ಸನ್ಮಾರ್ಗ ದರ್ಶನದ ವ್ಯವಸ್ಥೆಯನ್ನು ಮಾಡಿದ್ದಾನೆ. ಇಸ್ಲಾಮಿನ ಹೊರತು ಬೇರಾವ ಜೀವನ ಕ್ರಮವೂ ಸೃಷ್ಟಿಕರ್ತನ ಬಳಿ ಸ್ವೀಕಾರಾರ್ಹವಲ್ಲ. ಈ ಉದ್ದೇಶಕ್ಕಾಗಿ ಪ್ರಥಮ ಮಾನವ ಹ.ಆದಮ್(ಅ) ಅವರಿಂದ ಹಿಡಿದು ಪ್ರತಿಯೊಂದು ಕಾಲದಲ್ಲಿ ಮತ್ತು ಪ್ರತಿಯೊಂದು ಜನಾಂಗದಲ್ಲಿ ಅಲ್ಲಾಹನ ಆಯ್ದ ಪ್ರವಾದಿಗಳು ಬರುತ್ತಿದ್ದರು. ಅವರು ಈ ಸಂದೇಶವನ್ನು ಜನರಿಗೆ ತಲುಪಿಸುವ ಜತೆಗೆ ಅದನ್ನು ತಮ್ಮ ಜೀವಮಾನದಲ್ಲಿ ಸಂಪೂರ್ಣವಾಗಿ ಅಳವಡಿಸಿ ತೋರಿಸಿಕೊಟ್ಟರು. ಎಲ್ಲಿಯವರೆಗೆಂದರೆ 1400 ವರ್ಷಗಳ ಹಿಂದೆ ಅಂತಿಮ ಪ್ರವಾದಿ ಮುಹಮ್ಮದ್‌ರವರ(ಸ) ಮೂಲಕ ಈ ಸಂದೇಶವನ್ನು ಕೊನೆಯ ಸಲ ಸಂಪೂರ್ಣ ಮಾನವಕುಲಕ್ಕೆ ಕಳುಹಿಸಿಕೊಟ್ಟು ಪ್ರವಾದಿತ್ವದ ಈ ಪರಂಪರೆಯನ್ನು ಕೊನೆಗೊಳಿಸಿದನು. ಅವರ ನಂತರ ಪ್ರಳಯ ಕಾಲದ ವರೆಗೂ ಯಾವನೇ ಪ್ರವಾದಿ ಬರಲಿಕ್ಕಿಲ್ಲ. ಇನ್ನು ಮುಂದೆ, ಪ್ರಳಯ ಕಾಲದ ವರೆಗಿನ ಎಲ್ಲ ಮನುಷ್ಯರ ಪರಲೋಕ ಮೋಕ್ಷವು ಆ ಸಂದೇಶವನ್ನು ಅಂಗೀಕರಿಸಿ ಅದನ್ನು ಅನುಸರಿಸುವುದನ್ನು ಅವಲಂಬಿಸಿದೆ. ಪ್ರವಾದಿ ಮುಹಮ್ಮದ್(ಸ) ಅವರ ನಂತರ ಹಿಂದಿನೆಲ್ಲಾ ಪ್ರವಾದಿಗಳ ಧರ್ಮಶಾಸ್ತ್ರಗಳು ರದ್ದುಗೊಂಡಿವೆ. ಅವರು ತಂದ ಕೊನೆಯ ಧರ್ಮಶಾಸ್ತ್ರದ ಅನುಸರಣೆಯೇ ಇನ್ನು ಮನುಷ್ಯನಿಗಿರುವ ಮುಕ್ತಿಯ ಮಾರ್ಗವಾಗಿದೆ. ಅದರ ಹೊರತು ಬೇರಾವ ಮಾರ್ಗವೂ ಸೃಷ್ಟಿಕರ್ತನಿಗೆ ಖಂಡಿತ ಸ್ವೀಕಾರಾರ್ಹವಾಗಲಾರದು.

ಭಿನ್ನತೆ: ಒಂದು ವಾಸ್ತವಿಕತೆ

ಜಾಗತಿಕ ಧರ್ಮಗಳ ನಂಬಿಕೆ ಮತ್ತು ಸಿದ್ಧಾಂತಗಳ ಈ ವಿವರಣೆಯಿಂದ ಸೂರ್ಯನ ಬೆಳಕಿನಷ್ಟೇ ಸ್ಪಷ್ಟವಾಗಿ ತಿಳಿದು ಬರುವುದೇನೆಂದರೆ ಅವುಗಳ ನಡುವೆ ಇರುವ ವ್ಯತ್ಯಾಸವು ಮೂಲಭೂತ ಮತ್ತು ವಾಸ್ತವಿಕ ವ್ಯತ್ಯಾಸವಾಗಿದೆ. ಇಸ್ಲಾಮಿನ ಬುನಾದಿ ಏಕದೇವ ವಿಶ್ವಾಸವಾಗಿದ್ದು ಬಹುದೇವತ್ವ ಮತ್ತು ಮೂರ್ತಿಪೂಜೆಯ ಕಲ್ಪನೆಯೇ ಅದಕ್ಕೆ ಅಸಹನೀಯವಾಗಿದೆ. ಇನ್ನುಳಿದ ಎಲ್ಲ ಧರ್ಮಗಳಲ್ಲೂ ಬಹುದೇವ ವಿಶ್ವಾಸವು ಒಂದಲ್ಲ ಒಂದು ರೂಪದಲ್ಲಿ ಕಾಣ ಸಿಗುತ್ತದೆ. ಹಿಂದೂ ಧರ್ಮದ ಮೂಲವು ಬಹುದೇವ ವಿಶ್ವಾಸ, ಮೂರ್ತಿಪೂಜೆ ಮತ್ತು ಅದ್ವೈತವಾದವಾಗಿದೆ. ಬೌದ್ಧ ಧರ್ಮ, ಜೈನ ಧರ್ಮ ಮತ್ತಿತರ ಧರ್ಮಗಳಲ್ಲಿಯೂ ಈ ನಂಬಿಕೆಗಳಿವೆ. ಇಸ್ಲಾಮಿನ ಪ್ರಕಾರ ಎಲ್ಲ ಪ್ರವಾದಿಗಳೂ ಮಾನವರಾಗಿದ್ದು ಮಾನವೀಯ ಗುಣಗಳನ್ನು ಹೊಂದಿದವರಾಗಿದ್ದರು. ಹಿಂದೂ ಧರ್ಮ ಮತ್ತು ಅದರ ಉಪ ಧರ್ಮಗಳು ಅದ್ವೈತವಾದ ಮತ್ತು ಅವತಾರದ ಮೇಲೆ ವಿಶ್ವಾಸವಿಟ್ಟು, ತಮ್ಮ ಮಹಾನ್ ವ್ಯಕ್ತಿಗಳನ್ನು ದೇವತ್ವದ ಸ್ಥಾನಕ್ಕೆ ಏರಿಸಿದುವು. ಈ ನಂಬಿಕೆಗಳು ಅಲ್ಪಸ್ವಲ್ಪ ವ್ಯತ್ಯಾಸಗಳೊಂದಿಗೆ ಯಹೂದಿ ಮತ್ತು ಕ್ರೈಸ್ತ ಧರ್ಮಗಳಲ್ಲಿಯೂ ಇವೆ. ಇನ್ನೊಂದೆಡೆ ಯಹೂದಿಗಳು ತಮ್ಮ ಪ್ರವಾದಿಗಳ ಚಾರಿತ್ರ್ಯ ಹನನ ಮಾಡುತ್ತಾರೆ. ಅವರು ಹೇಯ ಅಪರಾಧಗಳನ್ನೆಸಗಿದ್ದಾರೆನ್ನುತ್ತಾರೆ. ಆದರೆ ಇಸ್ಲಾಮ್ ದೇವನ ಆ ಆಯ್ದ ದಾಸರು ಎಲ್ಲ ರೀತಿಯ ಪಾಪಗಳಿಂದಲೂ ಸಂಪೂರ್ಣ ಮುಕ್ತರಾಗಿದ್ದಾರೆಂದು ಸಾರುತ್ತದೆ. ಒಂದೆಡೆ

ಇಸ್ಲಾಮ್ ಎಲ್ಲ ಮನುಷ್ಯರ ಸಾಮಾಜಿಕ ಸಮಾನತೆಯನ್ನು ಪ್ರತಿಪಾದಿಸುತ್ತದೆ. ವರ್ಗ, ವರ್ಣ, ವಂಶಗಳ ಆಧಾರದಲ್ಲಿ ಅವರ ಮಧ್ಯೆ ಯಾವುದೇ ರೀತಿಯ ತಾರತಮ್ಯವನ್ನು ಅದು ಮಾನ್ಯ ಮಾಡುವುದಿಲ್ಲ. ಇನ್ನೊಂದೆಡೆ ಸಾಮಾಜಿಕ ಸಮಾನತೆ ಮತ್ತು ವರ್ಗ ವ್ಯವಸ್ಥೆಯು ಹಿಂದೂ ಧರ್ಮದ ಮುಖ್ಯ ಅಂಗವಾಗಿದೆ. ಇಸ್ಲಾಮ್ ಧರ್ಮ ಯಾವುದೇ ವ್ಯತ್ಯಾಸವಿಲ್ಲದೆ ಸ್ತ್ರೀ-ಪುರುಷರ ಮಧ್ಯೆ ವರ್ಗ ಸಮಾನತೆಯನ್ನು ಪ್ರತಿಪಾದಿಸುತ್ತದೆ. ಅದರ ಪ್ರಕಾರ ಸ್ತ್ರೀಯು ಯಾವುದೇ ರೀತಿಯಲ್ಲಿ ಪುರುಷನಿಗಿಂತ ಕೀಳಾದವಳಲ್ಲ. ಹಿಂದೂ ಮತ್ತು ಜೈನ ಧರ್ಮಗಳಲ್ಲಿ ಸ್ತ್ರೀಯನ್ನು ಪುರುಷನಿಗಿಂತ ನಿಕೃಷ್ಟಳಾದವಳೆಂದು ಸಾರಲಾಗಿದೆ. ಇಸ್ಲಾಮ್ ಈ ಜೀವನದ ಬಳಿಕ ಇನ್ನೊಂದು ಜೀವನ ಮತ್ತು ಪರಲೋಕ ವಿಶ್ವಾಸವನ್ನು ಹೊಂದಿದೆ. ಅಲ್ಲಿ ಪ್ರತಿಯೊಬ್ಬನಿಗೂ ನೇರವಾಗಿ ತನ್ನ ಕರ್ಮಗಳ ಕುರಿತು ವಿಚಾರಣೆಯನ್ನೆದುರಿಸಬೇಕಾಗುತ್ತದೆ. ಅಲ್ಲಿ ಯಾರದೇ ಸೊತ್ತು, ಸಂತತಿ, ಯಾವ ಕೆಲಸಕ್ಕೂ ಬಾರದು. ಯಾರದೇ ಒತ್ತಾಯ-ಶಿಫಾರಸು ಕೂಡಾ ಅವನಿಗೆ ಪ್ರಯೋಜನಕಾರಿಯಾಗದು ಎಂದು ಇಸ್ಲಾಮ್ ಹೇಳುತ್ತದೆ. ಇನ್ನೊಂದೆಡೆ ಹಿಂದೂ ಧರ್ಮ ಮತ್ತು ಅಂತಹ ಇತರ ಧರ್ಮಗಳು ಪುನರ್ಜನ್ಮದ ವಿಶ್ವಾಸದಿಂದ ಪರಲೋಕ ವಿಚಾರಣೆಯ ಈ ಕಲ್ಪನೆಯಿಂದ ತಮ್ಮ ಅನುಯಾಯಿಗಳಿಗೆ ಮುಕ್ತಿ ನೀಡುತ್ತವೆ. ಅದೇ ರೀತಿ ಯಹೂದಿ ಮತ್ತು ಕ್ರೈಸ್ತ ಧರ್ಮಗಳಲ್ಲಿರುವ 'ದೇವರ ಪ್ರೀತಿ ಪಾತ್ರರು' ಎಂಬ ನಂಬಿಕೆಯು ಅವರನ್ನು ಪರಲೋಕ ವಿಚಾರಣೆಯ ವಿಶ್ವಾಸದಿಂದ ಮುಕ್ತಗೊಳಿಸುತ್ತದೆ. ಇಸ್ಲಾಮ್ ಧರ್ಮದ ಪ್ರಕಾರ ವ್ಯಕ್ತಿಯ ಪೂರ್ಣ ಜೀವನದಲ್ಲಿ ಎಲ್ಲಿಯಾದರೂ ಅವನ ಹೆಜ್ಜೆಗಳು ಅದರ ಆದೇಶಕ್ಕೆ ವಿರುದ್ಧವಾಗಿ ಬಿದ್ದರೆ ಸೋಲು ಮತ್ತು ದೌರ್ಭಾಗ್ಯ ಅವನಿಗೆ ಕಟ್ಟಿಟ್ಟ ಬುತ್ತಿಯಾಗಿರುವುದು. ಆದರೆ ಕ್ರೈಸ್ತ ಧರ್ಮದಲ್ಲಿರುವ ಪ್ರಾಯಶ್ಚಿತ್ತದ ನಂಬಿಕೆಯು ಅವರನ್ನು ಧರ್ಮ ವಿಧಿಗಳ ಪಾಲನೆಯಿಂದ ಮುಕ್ತಗೊಳಿಸುತ್ತದೆ.

ಜಾಗತಿಕ ಧರ್ಮಗಳ ಮಧ್ಯೆ ಇರುವ ಈ ಮೂಲಭೂತ ವ್ಯತ್ಯಾಸಗಳಿಂದಾಗಿ 'ಸರ್ವ ಧರ್ಮ ಸಮಾನತೆಯ' ಸಿದ್ಧಾಂತವು ಪೊಳ್ಳು ಮತ್ತು ನಿರಾಧಾರವೆಂದಾಗುತ್ತದೆ. ಈ ವ್ಯತ್ಯಾಸಗಳಿರುತ್ತಾ ಎಲ್ಲ ಧರ್ಮಗಳೂ ಸಮಾನವಾಗಿ ಮುಕ್ತಿಯ ಮಾರ್ಗಗಳಾಗಿವೆ ಎನ್ನುವುದು, ಜೀವನದಲ್ಲಿ ಏಕದೇವತ್ವ ಮತ್ತು ಬಹುದೇವತ್ವ, ದೇವ ವಿಶ್ವಾಸ ಮತ್ತು ದೇವ ಧಿಕ್ಕಾರ, ಪರಲೋಕ ವಿಚಾರಣೆಯ ನಂಬಿಕೆ ಮತ್ತು ಅದರ ನಿರಾಕರಣೆ, ಪ್ರವಾದಿಗಳನ್ನು ನಂಬುವುದು ಮತ್ತು ನಂಬದಿರುವುದು, ಸಮಾನವೂ ಮುಕ್ತಿಗೆ ಹೇತುವೂ ಆಗಿದೆ ಎಂದು ಹೇಳಿದಂತೆಯೇ ಸರಿ. ಆದರೆ ಹೀಗೆ ಮಾಡುವುದಕ್ಕೆ ಮುಂಚೆ ನಿಘಂಟುಗಳಿಂದ 'ವ್ಯತ್ಯಾಸ' ಮತ್ತು 'ಭಿನ್ನತೆ' ಎಂಬ ಪದಗಳನ್ನೇ ಅಳಿಸಿ ಬಿಡಬೇಕಾಗುತ್ತದೆ. ಅನಂತರ ಹಗಲು ಮತ್ತು ರಾತ್ರಿ, ಬೆಳಕು ಮತ್ತು ಕತ್ತಲು, ಕುರುಡ ಮತ್ತು ಕಣ್ಣುಳ್ಳವ, ನೆರಳು ಮತ್ತು ಬಿಸಿಲು, ನಿರ್ಜೀವಿ ಮತ್ತು ಸಜೀವಿ ಇವೆಲ್ಲವನ್ನೂ ಒಂದೇ ರೀತಿ ಎಂದು ಘೋಷಿಸಬೇಕಾದೀತು. ಆದರೆ ಯಾವ ಪ್ರಜ್ಞಾವಂತನೂ ಈ ರೀತಿ ಹೇಳುವ ಧೈರ್ಯ ತೋರಲಾರ. ಹಾಗಿರುವಾಗ ಧರ್ಮಗಳ ಕುರಿತು ಮಾತ್ರ ಲೋಕದ ಎಲ್ಲ ಧರ್ಮಗಳೂ ಸಮಾನವಾಗಿದ್ದು ಯಾವುದೇ ಧರ್ಮವನ್ನನುಸರಿಸಿದರೂ ಮನುಷ್ಯನು ಮೋಕ್ಷ ಪಡೆಯಬಲ್ಲ ಎಂಬ ಈ ಧೋರಣೆಗೆ ಆಸ್ಪದ ಎಲ್ಲಿದೆ? ❑

ಸತ್ಯ ಧರ್ಮದ ಸಂಶೋಧನೆ

ಇದು 'ಸರ್ವ ಧರ್ಮ ಸಮಭಾವ'ದ ಒಂದು ಸ್ಥೂಲ ಸಮೀಕ್ಷೆ. ಈ ಸಮೀಕ್ಷೆಯಿಂದ ವ್ಯಕ್ತವಾಗುವುದೇನೆಂದರೆ ಅದರ ವಕ್ತಾರರ ಬಳಿ ವಿಚಾರ ಮತ್ತು ಚಿಂತನೆಯ ತೀವ್ರ ಕೊರತೆಯಿದೆ. ಚಿಂತನೆ ಮತ್ತು ಸಂಶೋಧನೆಯ ಬದಲು ಅವರಲ್ಲಿ ಮೇಲುಗೈ ಸಾಧಿಸಿರುವುದು ಕೇವಲ ಒಂದು ಹಂಬಲವಾಗಿದೆ. ಅದು ಐಕ್ಯದ ಹಂಬಲವಾಗಿರಲಿ ಅಥವಾ ತಾವು ತುಳಿದ ಮಾರ್ಗದ ದೃಢೀಕರಣದ ಹಂಬಲವಾಗಿರಲಿ. ಈ ತತ್ವದ ಪ್ರತಿಪಾದಕರು ಧರ್ಮದ ನೈಜ ತಾತ್ಪರ್ಯವನ್ನೇ ಅರಿತಿಲ್ಲ. ನಿಜವಾಗಿ ಧರ್ಮವೆಂದರೆ ದೇವನ ಇಚ್ಛೆಯನ್ನು ತಿಳಿಯುವುದು ಮತ್ತು ಅದರಂತೆ ನಡೆಯುವುದು ಎಂಬುದು ಅವರಿಗೆ ತಿಳಿದಿಲ್ಲ. ತನ್ನ ಒಲವು ಮತ್ತು ಅಭಿರುಚಿಯನ್ನು ಅನುಸರಿಸುವುದು ಧರ್ಮವಲ್ಲ.

ಸತ್ಯಸಂಧತೆ ಮತ್ತು ದೇವ ಭಕ್ತಿಯು ಮನುಷ್ಯನನ್ನು ಸತ್ಯವನ್ನು ಹುಡುಕುವಂತೆ ಪ್ರೇರೇಪಿಸಬೇಕು. ದೇವನು ನಮ್ಮಿಂದ ಏನು ಬಯಸುತ್ತಾನೆಂದು ಅರಿಯುವ ಜಿಜ್ಞಾಸೆಯಿರಬೇಕು. ದೇವನು ತೋರಿಸಿದ ನೇರ ಮಾರ್ಗವನ್ನು ಬಿಟ್ಟು ವಿಭಿನ್ನ ದಾರಿಗಳಲ್ಲಿ ಅಲೆಯುವುದು ಮತ್ತು ಪ್ರತಿಯೊಂದನ್ನೂ ಸರಿಯೆಂದು ಸಾರುವುದು ಧರ್ಮಕ್ಕೆ ಮಾಡುವ ಅಪಚಾರವಾಗಿದೆ. ದೇವನು ತನ್ನಿಂದೇನು ಬಯಸುತ್ತಾನೆಂಬ ಚಿಂತೆಯೇ ಮನುಷ್ಯನಿಗೆ ಇಲ್ಲದೆ ಹೋದರೆ, ತನ್ನ ಜೀವನದ ನೈಜ ವಿಧಾನ ಏನೆಂದು ತಿಳಿಯದೆಯೇ ಆತ ತನ್ನ ಸ್ಥಿತಿಯ ಬಗ್ಗೆ ಸಂತೃಪ್ತನಾಗಿದ್ದರೆ ಅವನ ನಿಲುವನ್ನು ದೇವನಿಷ್ಠೆಯ ನಿಲುವೆಂದು ಪರಿಗಣಿಸುವುದಾದರೂ ಹೇಗೆ?

'ಸರ್ವ ಧರ್ಮ ಸಮಭಾವ'ದ ಪ್ರತಿಪಾದಕರು ಒಂದು ವಿಷಯವನ್ನು ಮರೆತು ಬಿಡುತ್ತಾರೆ. ವಿಭಿನ್ನ ಧರ್ಮಗಳಲ್ಲಿ ಹಲವು ಮೂಲ ವಿಚಾರಗಳಲ್ಲಿ ಪರಸ್ಪರ ವಿರುದ್ಧವೆನಿಸುವ ಸಿದ್ಧಾಂತಗಳಿವೆ. ಅವುಗಳ ಮಧ್ಯೆ ಯಾವುದೇ ಹೋಲಿಕೆಯಿರುವುದಿಲ್ಲ. ಹಾಗಿರುವಾಗ ಅವುಗಳನ್ನೆಲ್ಲಾ ಸಮಾನವೆಂದು ಸಾರುವುದು ಮತ್ತು ಎಲ್ಲವೂ ಸರಿಯೆನ್ನುವುದು ಬುದ್ಧಿಗೆ ನಿಲುಕುವ ವಿಷಯವೇ? ಯಾವ ವಿಷಯವನ್ನು ಮನುಷ್ಯನ ಅಂತಃಕರಣ ಮತ್ತು ಅವನ

ಬುದ್ಧಿಯು ಬೆಂಬಲಿಸುವುದಿಲ್ಲವೋ ಅದನ್ನು ಮನುಷ್ಯನು ಪಾಲಿಸುವುದು ಖಂಡಿತ ಸಾಧ್ಯವಲ್ಲ. ಧರ್ಮದಿಂದ ಬೇಸತ್ತಿರುವ ಜನರನ್ನು ಇದು ಅದರ ಹತ್ತಿರ ತರಲಾರದು. ಇದರಿಂದಾಗಿ ಧರ್ಮದ ಪರಿಕಲ್ಪನೆಯೇ ಒಂದು ದೊಡ್ಡ ಪ್ರಹಸನವಾಗಿ ಮಾರ್ಪಡುತ್ತದೆ. ಇಂತಹ ಅವೈಚಾರಿಕ ವಿಷಯವನ್ನು ನಾವು ಒಪ್ಪಲಾರೆವು ಎಂದು ಅವರು ಹೇಳಿದರೆ ಖಂಡಿತವಾಗಿಯೂ ಸಮರ್ಥನೀಯವೇ ಆಗಿರುವುದು.

ನಾವು ಯಾವುದನ್ನು ಸರಿಯಲ್ಲವೆಂದು ತಿಳಿಯುತ್ತೇವೋ ಅದನ್ನು ಸರಿಯೆಂದು ವಾದಿಸುವುದು ಖಂಡಿತ ಸಹಿಷ್ಣುತೆ ಆಗಲಾರದು. ಯಾವುದು ನಮ್ಮ ದೃಷ್ಟಿಯಲ್ಲಿ ಸರ್ವ ಶ್ರೇಷ್ಠವೋ ಅದನ್ನು ಸರ್ವಶ್ರೇಷ್ಠವೆಂದು ಹೇಳದಿರುವುದು ವಿಶಾಲ ಮನೋಭಾವವಲ್ಲ. ಈ ಸಿದ್ಧಾಂತದ ಮೂಲಕ ನಾವು ಸಂಶೋಧನೆ ಮತ್ತು ಜಿಜ್ಞಾಸೆಯ ದ್ವಾರವನ್ನು ಮುಚ್ಚಿ ಬಿಟ್ಟಂತಾಗುವುದು. ಪ್ರತಿಯೊಬ್ಬನೂ ತಾನು ಯಾವುದನ್ನು ಸರಿಯೆಂದು ಭಾವಿಸುತ್ತಾನೋ ಅದನ್ನು ಸರಿಯೆಂದು ಹೇಳುವ ಮತ್ತು ಸ್ವೀಕರಿಸುವ ಆತನ ಮೂಲಭೂತ ಹಕ್ಕನ್ನು ಮಾನ್ಯ ಮಾಡುವುದೇ ನಿಜವಾದ ಸಹಿಷ್ಣುತೆಯಾಗಿದೆ.

ಇಂದು ಜಗತ್ತಿನಲ್ಲಿರುವ ಎಲ್ಲ ಧರ್ಮಗಳು ಸಮಾನವೆಂದೂ ಅವುಗಳ ಮಧ್ಯೆ ಕೇವಲ ಪಾರಿಭಾಷಿಕಗಳ ಅಂತರವಿರುವುದೆಂದೂ ಪ್ರತಿಪಾದಿಸುವ ಜನರ ಅಧ್ಯಯನ ಅತ್ಯಂತ ಸೀಮಿತವಾಗಿರುತ್ತದೆ. ಸತ್ಯಧರ್ಮವು ಸದಾ ಒಂದೇ ಆಗಿತ್ತು. ಆದ್ದರಿಂದ ಅದು ಒಂದೇ ಆಗಿರಬೇಕು ಎಂಬ ವಾಸ್ತವಿಕತೆಯನ್ನು ಗಾಢವಾದ ಅಧ್ಯಯನದಿಂದ ಯಾರಿಗೂ ಕಂಡುಕೊಳ್ಳ ಬಹುದಾಗಿದೆ. ಆದ್ದರಿಂದ ಧರ್ಮಗಳ ಏಕತೆಯಲ್ಲ; ಏಕೈಕ ಧರ್ಮವೆಂಬ ಸಿದ್ಧಾಂತವೇ ಹೆಚ್ಚು ವೈಚಾರಿಕವೆನಿಸುತ್ತದೆ. ಈ ಏಕೈಕ ಸತ್ಯ ಧರ್ಮದ ಶೋಧವೇ ಮನುಷ್ಯನ ಅತಿ ದೊಡ್ಡ ಜವಾಬ್ದಾರಿಯಾಗಿದೆ. ಆ ಏಕೈಕ ಸತ್ಯ ಧರ್ಮದಲ್ಲಿ ಕಾಲ ಕ್ರಮೇಣ ಬದಲಾವಣೆಯಾಗುತ್ತಾ ಬಂದು ಅನೇಕ ವಿಭಿನ್ನ ಧರ್ಮಗಳಾಗಿರಬಹುದು. ಇಂತಹ ಸನ್ನಿವೇಶದಲ್ಲಿ ಈ ನೈಜ ಧರ್ಮದ ಹುಡುಕಾಟ ನಡೆಯಬೇಕೇ ಹೊರತು ನಾವು ಹುಡುಕಾಟವನ್ನು ಬಿಟ್ಟು ಯಾವುದೋ ಪೂರ್ವಗ್ರಹಕ್ಕೆ ಕಟ್ಟು ಬಿದ್ದು ಒಂದು ಕಲ್ಪಿತ ಸಿದ್ಧಾಂತದ ಸಮರ್ಥನೆಯಲ್ಲೇ ನಮ್ಮೆಲ್ಲ ಸಾಮರ್ಥ್ಯವನ್ನು ವ್ಯಯಿಸುವುದು ಸರಿಯಾಗದು. ಇಂತಹ ಜಿಜ್ಞಾಸೆ ಮತ್ತು ಸಂಶೋಧನೆಯಲ್ಲಿ ಪವಿತ್ರ ಕುರ್‌ಆನ್ ನಮಗೆ ಪೂರ್ಣ ಮಾರ್ಗದರ್ಶನ ಮಾಡಬಲ್ಲುದು. ಆದರೆ ನಾವು ಸಮಸ್ಯೆಯನ್ನು ಗಂಭೀರವಾಗಿ ಅರಿಯುವ ಪ್ರಯತ್ನ ಮಾಡಬೇಕು. ಈ ಜಿಜ್ಞಾಸೆ ಮತ್ತು ಸಂಶೋಧನೆಯ ಪರಿಣಾಮವಾಗಿ ನಾವು ಮಾನವಕುಲದ ನೈಜ ಧರ್ಮವಾದ ಆ ಪರಮ ಸತ್ಯ ಅಥವಾ ಧರ್ಮವನ್ನು ಕಂಡು ಕೊಂಡರೆ ಅದುವೇ ಎಲ್ಲರ ಪಾಲಿಗೂ ಸ್ವೀಕಾರಾರ್ಹವಾಗಬಹುದು. ಅದರ ಮೂಲಕವೇ ವಿಶ್ವಾಸ-ಶ್ರದ್ಧೆ ಮತ್ತು ಧರ್ಮದ ಮಟ್ಟದಲ್ಲಿ ಏಕತೆ ಸ್ಥಾಪನೆಗೊಂಡು ಅದು ಶಾಶ್ವತವಾಗಿ ಉಳಿಯಬಹುದು.

□

ಒಂದು ಹೊಸ ಸಿದ್ಧಾಂತದ ಅಗತ್ಯ

ಇಂದು ಜಗತ್ತಿನಲ್ಲಿ ಪ್ರಚಲಿತವಿರುವ ಎಲ್ಲ ಧರ್ಮಗಳ ಮಧ್ಯೆ ಮೂಲಭೂತ ಮತ್ತು ಕಂಡುಕೊಳ್ಳಲಾಗದ ಪರಿಹಾರ ಸ್ವರೂಪದ ಭಿನ್ನತೆಗಳಿರುವುದು ನಮಗೆ ಈಗಾಗಲೇ ಸ್ಪಷ್ಟವಾಗಿದೆ.

ಮಾನವರ ಮಧ್ಯೆ ನೈಜ ಐಕ್ಯ, ಸಹೋದರತೆ, ಸಾಮರಸ್ಯ ಮತ್ತು ಶಾಂತಿಯುತ ಸಹಬಾಳ್ವೆಯನ್ನು ಬಯಸುವ ಪ್ರತಿಯೊಬ್ಬ ಮಾನವ ಪ್ರೇಮಿಯು ಎದುರಿಸುತ್ತಿರುವ ಸಮಸ್ಯೆಯ ಸ್ವರೂಪವು 'ಸರ್ವ ಧರ್ಮ ಸಮಾನತೆ' ಎಂಬ ಪೊಳ್ಳು ಘೋಷಣೆಯಿಂದ ಖಂಡಿತ ಪರಿಹಾರ ಕಾಣಲಾರದು.

ಆ ಪರಿಹಾರವು ಹಲವು ಧರ್ಮಗಳ ಕಲ್ಪನೆಯನ್ನು ಕೈಬಿಟ್ಟು ಏಕೈಕ ಧರ್ಮದ ಕಲ್ಪನೆಯನ್ನು ಅಂಗೀಕರಿಸುವುದರಲ್ಲಿದೆ.

ವಿಜ್ಞಾನವು ಎಲ್ಲ ಕಾಲಗಳಲ್ಲಿಯೂ ಎಲ್ಲ ಪ್ರದೇಶಗಳಲ್ಲಿಯೂ ಎಲ್ಲ ಸನ್ನಿವೇಶ ಗಳಲ್ಲಿಯೂ ಒಂದೇ ಆಗಿದೆ. ವಿಜ್ಞಾನದ ಯಾವುದೇ ಶಾಖೆಯ ಅಭ್ಯಾಸ ಮಾಡಿ ನೋಡಿ. ಅದರಲ್ಲಿ ಭಾರತೀಯ ವಿಜ್ಞಾನ, ಅರಬ್ ವಿಜ್ಞಾನ, ಪೌರ್ವಾತ್ಯ ವಿಜ್ಞಾನ ಮತ್ತು ಪಾಶ್ಚಾತ್ಯ ವಿಜ್ಞಾನವೆಂಬುದಿಲ್ಲ.

ಈ ಜಗತ್ತಿನ ಸೃಷ್ಟಿ, ಅದರ ಹಿಂದಿರುವ ಶಕ್ತಿ, ಆ ಸೃಷ್ಟಿಯ ಉದ್ದೇಶ, ಮಾನವ ಜೀವನದ ಉದ್ದೇಶ, ಅದರ ನೈಜ ನೆಲೆ, ಮರಣಾನಂತರ ಜೀವನ ಇತ್ಯಾದಿ ಧರ್ಮಕ್ಕೆ ಸಂಬಂಧಿಸಿದ ವಿಷಯಗಳು ಕೂಡಾ ಆಧ್ಯಾತ್ಮಿಕ ಮತ್ತು ಧಾರ್ಮಿಕ ವಿಜ್ಞಾನವಾಗಿದೆ. ಅದರಲ್ಲಿ ಕೂಡಾ ಮೂಲಭೂತ ಪ್ರಶ್ನೆಗಳ ಉತ್ತರ - ಮೂಲಭೂತ ವಿಷಯಗಳ ಬಗೆಗಿನ ನಿಲುವು- ದೇವರು, ಮನುಷ್ಯ, ಜೀವನ, ಜಗತ್ತು, ಇಹಲೋಕ-ಪರಲೋಕ ಎಂಬ ವಿಷಯಗಳ ಬಗ್ಗೆ ನಿಖರವಾದ ಮತ್ತು ಸಮಾನವಾದಂತಹ ಧೋರಣೆ- ಎಲ್ಲ ಕಾಲ, ದೇಶ, ಭಾಷೆ ಮತ್ತು ಪರಿಸರದ ಜನರಲ್ಲಿ ಒಂದೆ ಧರ್ಮದಲ್ಲಿರಬೇಕು.

ಅದುವೇ ಏಕೈಕ ದೈವಿಕ ಧರ್ಮವೆನಿಸುತ್ತದೆ. ಜಗತ್ತಿನ ಧರ್ಮಗಳಲ್ಲಿ ಮಾನವ ಹಸ್ತಕ್ಷೇಪದಿಂದಾಗಿ ಉಂಟಾಗಿರುವ ಭಿನ್ನತೆಗಳನ್ನು ನಿವಾರಿಸಿ ಐಕ್ಯ ಸಾಧಿಸಲು ಅದಕ್ಕೆ ಮಾತ್ರ ಸಾಧ್ಯವಾದೀತು.

ಇಂದು ಈ ಜಗತ್ತಿಗೆ ಇಂತಹ ಒಂದು ಹೊಸ ಸಿದ್ಧಾಂತದ ಅಗತ್ಯವಿದೆ. ❑

ಇಸ್ಲಾಮ್: ಅಂತಿಮ ದೈವಿಕ ಧರ್ಮ

ಧರ್ಮದ ಇಸ್ಲಾಮೀ ಕಲ್ಪನೆಯ ಪ್ರಕಾರ ಈ ಜಗತ್ತಿಗೆ ಬಂದ ಒಂದು ಲಕ್ಷಕ್ಕಿಂತಲೂ ಅಧಿಕ ಪ್ರವಾದಿಗಳು ಮೂಲತಃ ಒಂದೇ ಧರ್ಮವನ್ನು ತಂದಿದ್ದರು. ಕಾಲದ ಬೇಡಿಕೆಗಳಿಗನುಸಾರವಾಗಿ ಆ ಪ್ರವಾದಿಗಳ ಬೋಧನೆಗಳ ಮಧ್ಯೆ ಚಿಕ್ಕ ಪುಟ್ಟ ಮತ್ತು ಆಂಶಿಕ ಭಿನ್ನತೆಗಳಿರಬಹುದಾದರೂ ಮೂಲಭೂತ ವಿಶ್ವಾಸ ಶ್ರದ್ಧೆಗಳ ವಿಷಯದಲ್ಲಿ ಅವುಗಳ ಮಧ್ಯೆ ಯಾವುದೇ ಮೌಲಿಕ ಮತ್ತು ತಾತ್ವಿಕ ಭಿನ್ನತೆಗಳಿರಲಿಲ್ಲ. ಈ ಎಲ್ಲ ಪ್ರವಾದಿಗಳ ಪರಂಪರೆ ಒಂದೇ ಆಗಿದೆ. ಪ್ರಥಮ ಪ್ರವಾದಿ ಹ.ಆದಮ್(ಅ) ಅವರಿಂದ ಅಂತಿಮ ಪ್ರವಾದಿ ಹ. ಮುಹಮ್ಮದ್‌ರವರ(ಸ) ತನಕ ಎಲ್ಲರೂ ಜಗತ್ತಿನ ಸೃಷ್ಟಿಕರ್ತನೂ ಪರಿಪಾಲಕನೂ ಪ್ರಭುವೂ ಆದ ಒಬ್ಬನೇ ದೇವನ ಸಂದೇಶವಾಹಕರಾಗಿದ್ದು ಅವರ ಸಂದೇಶಗಳು ಮತ್ತು ಜೀವನದ ಹಾದಿಗಳು ವಿಭಿನ್ನವಾಗಿರುವುದು ಸಾಧ್ಯವೇ ಇಲ್ಲ. ಸತ್ಯಧರ್ಮದ ಈ ಏಕತೆ, ಸಮಾನತೆ ಮತ್ತು ದೈವಿಕ ಸಂದೇಶದ ಈ ನಿರಂತರತೆಯ ಬೇಡಿಕೆಯಂತೆ ಆ ಧರ್ಮವು ಇತಿಹಾಸದ ಯಾವುದಾದರೊಂದು ಘಟ್ಟದಲ್ಲಿ ಪರಿಪೂರ್ಣಗೊಂಡು ಅದಕ್ಕೆ ಅಂತಿಮ ಧರ್ಮವೆಂಬ ಮೆಚ್ಚುಗೆ ಮತ್ತು ಸ್ವೀಕೃತಿ ಅಲ್ಲಾಹನಿಂದ ದೊರೆಯಬೇಕು. ದೈವಿಕ ಮಾರ್ಗದರ್ಶನ ಒಂದೇ ಆಗಿದ್ದು ಕಾಲಕಾಲಕ್ಕೆ ಅದರಲ್ಲಿ ಆಂಶಿಕ ಬದಲಾವಣೆಗಳು ಮಾತ್ರ ಆಗಿವೆ ಎಂದ ಮೇಲೆ ಆ ಮಾರ್ಗದರ್ಶನವನ್ನು ಸೂಕ್ತ ಕಾಲದಲ್ಲಿ ಪರಿಪೂರ್ಣಗೊಳಿಸಬೇಕಾದುದೂ ಬುದ್ಧಿಯ ಬೇಡಿಕೆಯಾಗಿದೆ. ಇಂದು ಲೋಕದಲ್ಲಿ 'ಇಸ್ಲಾಮ್' ಎಂಬ ಹೆಸರಲ್ಲಿ ಕರೆಯಲ್ಪಡುವ ಧರ್ಮವು ಆ ದೈವಿಕ ಮಾರ್ಗದರ್ಶನದ ಅಂತಿಮ ರೂಪವಾಗಿದೆ. ಪ್ರವಾದಿ ಮುಹಮ್ಮದ್‌ರವರು(ಸ) ಜಗತ್ತಿನ ಮುಂದಿರಿಸಿದ ದೈವಿಕ ವಾಣಿ 'ಪವಿತ್ರ ಕುರ್‌ಆನ್' ಮತ್ತು ಅದನ್ನು ಕಾರ್ಯರೂಪಕ್ಕೆ ತಂದ ಪ್ರವಾದಿವರ್ಯರ(ಸ) ನಡೆ-ನುಡಿಗಳಾದ 'ಹದೀಸ್'ಗಳು ಈಗಲೂ ತಮ್ಮ ಅಪ್ಪಟ ರೂಪದಲ್ಲಿವೆ ಮತ್ತು ಪ್ರಳಯ ಕಾಲದವರೆಗೆ ಅವುಗಳು ಹಾಗೆಯೇ ಉಳಿದಿರುವ ವ್ಯವಸ್ಥೆಯನ್ನೂ ಮಾಡಲಾಗಿದೆ. ಇನ್ನು ಪ್ರಳಯ ಕಾಲದ ತನಕ ಮಾನವಕುಲಕ್ಕೆ ಯಾವುದೇ ಹೊಸ ಮಾರ್ಗದರ್ಶನದ ಅಗತ್ಯ ಉಳಿದಿಲ್ಲ. ಪ್ರವಾದಿ ಮುಹಮ್ಮದ್(ಸ) ಅವರ ಸಂದೇಶವು

ಯಾವುದೇ ಕಾಲ, ಪ್ರದೇಶ ಮತ್ತು ಭಾಷೆಗೆ ಸೀಮಿತವಾಗಿರದೆ ಪ್ರಳಯ ಕಾಲದ ವರೆಗೆ ಹುಟ್ಟುವ ಎಲ್ಲ ಮಾನವರಿಗೆ ಎಲ್ಲ ಭಾಷೆ ಮತ್ತು ಪ್ರದೇಶದವರಿಗೆ ಸಾರ್ವತ್ರಿಕವಾಗಿದೆ.

'ಸರ್ವಧರ್ಮ ಸಮಾನತೆಯ ಭಾರತೀಯ ಕಲ್ಪನೆಗೆ ವಿರುದ್ಧವಾಗಿ ಧರ್ಮಗಳ ಏಕತೆಯ ಈ ಸಿದ್ಧಾಂತವು ವಾಸ್ತವಿಕವೂ ಬುದ್ಧಿಗೆ ನಿಲುಕುವಂತಹದ್ದೂ ಆಗಿದೆ. ಇಂದಿಗೂ ಏಕದೇವ ಕಲ್ಪನೆಯು ಮೂಲತಃ ಎಲ್ಲ ಧರ್ಮಗಳಲ್ಲಿಯೂ ಇದೆ. ಬಹುದೇವಾರಾಧನೆಯ ಕಲ್ಪನೆಯೇ ಅನಂತರದ ಸೇರ್ಪಡೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಇಂದು ವಿಶ್ವ ಧರ್ಮಗಳ ಪವಿತ್ರ ಗ್ರಂಥಗಳಲ್ಲಿ ವಿಶ್ವಾಸ-ಶ್ರದ್ಧೆ ಮತ್ತು ಆರಾಧನೆಗಳಿಂದ ಹಿಡಿದು ಜೀವನದ ವ್ಯವಹಾರಗಳ ತನಕ ಅನೇಕ ವಿಷಯಗಳಲ್ಲಿ ಸಮಾನತೆ ಮತ್ತು ಏಕರೂಪತೆ ಕಂಡು ಬರುತ್ತದೆ. ಹಳೆಯ ಮತ್ತು ಹೊಸ ಒಡಂಬಡಿಕೆಗಳಲ್ಲಂತೂ ಇದು ಇನ್ನೂ ಅಧಿಕವಾಗಿದೆ. ಕುರ್‌ಆನಿನ ಪ್ರಕಾರ ಇವು ಇಬ್ಬರು ಮಹಾನ್ ಪ್ರವಾದಿಗಳಾದ ಹ. ಮೂಸಾ(ಅ) ಮತ್ತು ಹ.ಈಸಾ(ಅ) ಅವರಿಗೆ ಅವತೀರ್ಣಗೊಂಡ ತೌರಾತ್ ಮತ್ತು ಇಂಜೀಲ್ ಎಂಬ ಮೂಲ ಗ್ರಂಥಗಳ ಪರಿಷ್ಕೃತ ರೂಪಗಳಾಗಿವೆ. ಈ ಇಬ್ಬರು ಮಹಾನ್ ಪ್ರವಾದಿಗಳು ಪ್ರವಾದಿ ಮುಹಮ್ಮದ್(ಸ) ಅವರು ತಂದಿದ್ದ ದೈವಿಕ ಸಂದೇಶವನ್ನೇ ತಂದಿದ್ದರು. ಆದರೆ ಕಾಲಕ್ರಮೇಣ ಅವರ ಅನುಯಾಯಿಗಳು ಆ ಗ್ರಂಥಗಳನ್ನೂ ಆ ಸಂದೇಶವನ್ನೂ ತಮ್ಮಿಚ್ಛೆಯಂತೆ ಪರಿಷ್ಕರಿಸಿಕೊಂಡರು. ಧಾರ್ಮಿಕ ಗ್ರಂಥಗಳಲ್ಲಿ ಕಂಡು ಬರುವ ಈ ಏಕರೂಪತೆಯ ಮೂಲ ಕಾರಣ ಅವುಗಳೆಲ್ಲ ಮೂಲತಃ ಒಬ್ಬನೇ ದೇವನಿಂದ ಬಂದುದಾಗಿದೆ. ಇಸ್ಲಾಮ್ ಇದನ್ನೇ ಪ್ರತಿಪಾದಿಸುತ್ತದೆ. ಪ್ರವಾದಿ ಮುಹಮ್ಮದ್‌ರಿಗಿಂತ(ಸ) ಮೊದಲು ಬಂದ ಎಲ್ಲ ಪ್ರವಾದಿಗಳನ್ನೂ ಪವಿತ್ರ ಕುರ್‌ಆನ್‌ಗಿಂತ ಮೊದಲು ಅವತೀರ್ಣಗೊಂಡ ಎಲ್ಲ ದೇವ ಗ್ರಂಥಗಳನ್ನು ನಂಬಬೇಕಾದುದು ಅವರ ಅನುಯಾಯಿಗಳಿಗೆ ಕಡ್ಡಾಯವಾಗಿದೆ. ಆದರೆ ಜಾಗತಿಕ ಧರ್ಮಗಳಲ್ಲಿರುವ ಅಥವಾ ಅವುಗಳಲ್ಲಿ ಸೃಷ್ಟಿಸಲಾಗಿರುವ ಮೂಲಭೂತ ಭಿನ್ನತೆಗಳ ಹೊರತಾಗಿಯೂ ಆಯ್ಕೆ ಮತ್ತು ಆದ್ಯತೆಯ ಪ್ರಶ್ನೆಯೇ ಇಲ್ಲದೆ ಆ ಪೈಕಿ ಯಾವ ಧರ್ಮವನ್ನು ಅನುಸರಿಸಿದರೂ ದೇವ ಸಂಪ್ರೀತಿಯನ್ನು ಗಳಿಸಬಹುದೆಂಬುದು ಇದರ ಅರ್ಥ ಖಂಡಿತ ಅಲ್ಲ. ಏಕದೇವ ವಿಶ್ವಾಸ ಮತ್ತು ಬಹುದೇವ ವಿಶ್ವಾಸ, ದೇವದಾಸ್ಯ ಮತ್ತು ಮನುಷ್ಯರ ದಾಸ್ಯ, ಆಸ್ತಿಕತೆ ಮತ್ತು ನಾಸ್ತಿಕತೆಗಳ ಪೈಕಿ ಪ್ರತಿಯೊಂದರಿಂದಲೂ ದೇವ ಸಂಪ್ರೀತಿ ಲಭಿಸುತ್ತದೆಂದು ಬಗೆದರೆ ಅದನ್ನು ತರ್ಕಬದ್ಧ ನಿಲುವು ಎಂದು ಯಾರೂ ಹೇಳಲಾರ.

"ಅಲ್ಲಾಹನ ಬಳಿ ಧರ್ಮವು ಕೇವಲ ಇಸ್ಲಾಮ್ ಆಗಿದೆ." (3:19)

ಪವಿತ್ರ ಕುರ್‌ಆನಿನ ಈ ವಚನವು ಆ ಹೊಸ ಸಿದ್ಧಾಂತಕ್ಕೆ ಮೂರ್ತರೂಪ ನೀಡಿದಂತಿದೆ.

ಅರ್ಥಾತ್ ಸಕಲ ವಿಶ್ವದ ಸೃಷ್ಟಿಕರ್ತನೂ ಒಡೆಯನೂ ಪರಿಪಾಲಕನೂ ಅಧಿಪತಿಯೂ ಆದ ಅಲ್ಲಾಹನ ಬಳಿ ಮಾನವನಿಗೆ ಒಂದೇ ಒಂದು ಜೀವನ ವ್ಯವಸ್ಥೆ ಮತ್ತು ಒಂದೇ ಒಂದು ಬಾಳುವೆಯ ಮಾರ್ಗವು ಸರಿಯಾದುದಾಗಿದೆ. ಅದೆಂದರೆ ಮನುಷ್ಯನು ಆ ಅಲ್ಲಾಹನನ್ನು ತನ್ನ ಒಡೆಯನೂ ಆರಾಧ್ಯನೂ ಆಗಿರುವನೆಂಬುದನ್ನು ಸಮ್ಮತಿಸಿ ಅವನ

ದಾಸ್ಯಕ್ಕೆ ತನ್ನನ್ನು ಸಂಪೂರ್ಣವಾಗಿ ಅರ್ಪಿಸಿ ಬಿಡುವುದು. ಅವನ ದಾಸ್ಯದ ಕ್ರಮವನ್ನು ತಾನೇ ಆವಿಷ್ಕರಿಸಿಕೊಳ್ಳಬಾರದು. ಅವನು ತನ್ನ ಸಂದೇಶವಾಹಕರುಗಳ ಮೂಲಕ ಕಳುಹಿಸಿದ ಮಾರ್ಗದರ್ಶನವನ್ನು ಚಾಚೂ ತಪ್ಪದೆ ಪಾಲಿಸಬೇಕು.

ಈ ವಿಚಾರ ಶೈಲಿಯನ್ನು 'ಇಸ್ಲಾಮ್' ಎನ್ನಲಾಗುತ್ತದೆ. ವಿಶ್ವದ ಸೃಷ್ಟಿಕರ್ತ ಮತ್ತು ಯಜಮಾನ ತನ್ನ ಸೃಷ್ಟಿ ಮತ್ತು ತನ್ನ ಪ್ರಜೆಗಳ ಪಾಲಿಗೆ ಇಸ್ಲಾಮಿನ ಹೊರತು ಇನ್ನಾವ ಕಾರ್ಯಶೈಲಿಯನ್ನೂ ಸಿಂಧುವೆಂದು ಪರಿಗಣಿಸದೆ ಇರುವುದು ಅತ್ಯಂತ ಸಹಜವಾಗಿದೆ.

ಮನುಷ್ಯನು ತನ್ನ ಹೆಡ್ಡತನದಿಂದಾಗಿ ತನ್ನ ಪಾಲಿಗೆ ನಾಸ್ತಿಕತೆಯಿಂದ ಹಿಡಿದು ಬಹುದೇವ ವಿಶ್ವಾಸ ಮತ್ತು ಮೂರ್ತಿ ಪೂಜೆಯ ವರೆಗೆ ಎಲ್ಲ ಸಿದ್ಧಾಂತ ಮತ್ತು ಮತಗಳ ಅನುಸರಣೆಯ ಹಕ್ಕುಳ್ಳವನೆಂದು ಭಾವಿಸುತ್ತಾನೆ. ಆದರೆ ವಿಶ್ವದೊಡೆಯನ ದೃಷ್ಟಿಯಲ್ಲಿ ಇದು ಅಪ್ಪಟ ಬಂಡಾಯವಾಗಿದೆ.

ಈ ಸಿದ್ಧಾಂತದ ಪ್ರಕಾರ ಈ ಭೂಮುಖದ ಮೇಲೆ ನೆಲೆಗೊಳಿಸಲ್ಪಟ್ಟ ಪ್ರಥಮ ಮಾನವರು (ಆದಮ್ ಮತ್ತು ಹವ್ವಾ) ಬಂದದ್ದು ಅಂಧಕಾರದಲ್ಲಲ್ಲ. ಅವರ ಜೀವನವನ್ನು ಅಲ್ಲಾಹನು ಪೂರ್ಣ ಬೆಳಕಿನಲ್ಲಿ ಮಾಡಿದ್ದನು. ಅವರು ತಮ್ಮ ಮತ್ತು ವಿಶ್ವದ ವಾಸ್ತವಿಕತೆಯನ್ನು ಬಲ್ಲವರಾಗಿದ್ದರು. ಅವರಿಗೆ ಅವರ ಜೀವನ ನಿಯಮವನ್ನು ತಿಳಿಸಿಕೊಡಲಾಗಿತ್ತು. ಅವರ ಜೀವನ ಕ್ರಮವು ದೇವರ ಅನುಸರಣೆ (ಅರ್ಥಾತ್ ಇಸ್ಲಾಮ್) ಆಗಿತ್ತು. ಅವರು ತಮ್ಮ ಸಂತತಿಗೂ ದೇವಾನುಸರಣೆಯ ಮಾರ್ಗವನ್ನು ಕಲಿಸಿ ಹೋದರು.

ಆದರೆ ಕಾಲಕ್ರಮೇಣ ಮನುಷ್ಯನು ಆ ನೇರ ಮಾರ್ಗ(ಧರ್ಮ)ದಿಂದ ದೂರ ಸರಿದನು. ಅನೇಕ ತರದ ದುರ್ಮಾರ್ಗಗಳಲ್ಲಿ ಸಾಗ ತೊಡಗಿದನು. ಆ ಸನ್ಮಾರ್ಗವನ್ನು ಅವರು ತಮ್ಮ ಅಜಾಗ್ರತೆಯಿಂದ ಕಳೆದುಕೊಂಡರು ಮತ್ತು ತಮ್ಮ ತುಂಟತನದಿಂದ ಅದನ್ನು ವಿರೂಪಗೊಳಿಸಿದರು.

ಅವರು ಅಲ್ಲಾಹನ ಜತೆ ವಿಭಿನ್ನ ಕಾಲ್ಪನಿಕ ಮತ್ತು ಭೌತಿಕ ಮಾನವ ಮತ್ತು ಮಾನವೇತರರ ಅಸ್ತಿತ್ವವನ್ನು ದೇವತ್ವದಲ್ಲಿ ಪಾಲುದಾರರಾಗಿ ಮಾಡಿದರು. ಅವರು ದೇವರು ಕೊಟ್ಟ ವಾಸ್ತವಿಕ ಜ್ಞಾನಕ್ಕೆ ಅನೇಕ ಭ್ರಮೆ, ಸಿದ್ಧಾಂತ ಮತ್ತು ತತ್ವಜ್ಞಾನಗಳ ಕಲಬೆರಕೆ ಮಾಡಿ ಅನೇಕ ಧರ್ಮಗಳನ್ನು ಸೃಷ್ಟಿಸಿದರು.

ಅವರು ದೇವನು ನಿಶ್ಚಯಿಸಿದ ನ್ಯಾಯಪೂರ್ಣ ನೈತಿಕ ಮತ್ತು ನಾಗರಿಕ ತತ್ವಗಳನ್ನು ತೊರೆದು ಅಥವಾ ಅವುಗಳನ್ನು ಕೆಡಿಸಿ ತಮ್ಮ ಇಚ್ಛಾನುಸಾರ ಅಥವಾ ತಮ್ಮ ಪಕ್ಷಪಾತ ನೀತಿಗನುಸಾರವಾಗಿ ಮನುಷ್ಯ ಜೀವನವೇ ಗೊಂದಲದಿಂದ ತುಂಬಿ ಹೋಗುವಂತಹ ಜೀವನ ನಿಯಮಗಳನ್ನು ಆವಿಷ್ಕರಿಸಿದರು.

ತಾನು ಮನುಷ್ಯರಿಗೆ ನೀಡಿರುವಂತಹ ಸೀಮಿತ ಸ್ವಯಮಾಡಳಿತದಿಂದಾಗಿ ದೇವನು ನೇರ ಹಸ್ತಕ್ಷೇಪ ನಡೆಸಿ ಕೆಟ್ಟ ಮನುಷ್ಯರನ್ನು ಸರಿದಾರಿಗೆ ತರುವುದು ಅವನ ರೂಢಿಯಲ್ಲ.

ಮನುಷ್ಯರಿಗೆ ಈ ಲೋಕದಲ್ಲಿ ನೀಡಲ್ಪಟ್ಟ ಅವಧಿಯನ್ನು ಪೂರ್ಣವಾಗಿ ಬಳಸುವ ಅವಕಾಶವನ್ನು ಅವನು ದಯಪಾಲಿಸುತ್ತಾನೆ. ವ್ಯಕ್ತಿಗಳಂತೆ ಜನಾಂಗಗಳಿಗೂ ಒಂದು ಕಾಲಾವಧಿ ನಿಶ್ಚಯವಾಗಿರುತ್ತದೆ. ಆ ಅವಧಿ ಮುಗಿಯುವ ತನಕ ಅವರ ಬಳಿ ದೇವಪ್ರವಾದಿಗಳು ಬರುತ್ತಿರುತ್ತಾರೆ.

ಈ ಪ್ರವಾದಿಗಳು ವಿಭಿನ್ನ ಜನಾಂಗ ಮತ್ತು ರಾಷ್ಟ್ರಗಳಲ್ಲಿ ಬರುತ್ತಿದ್ದರು. ಸಾವಿರಾರು ವರ್ಷಗಳ ತನಕ ಅವರ ಆಗಮನದ ಪರಂಪರೆಯು ನಡೆಯುತ್ತಿತ್ತು. ಅವರೆಲ್ಲರ ಧರ್ಮ ಒಂದೇ ಆಗಿತ್ತು. ಪ್ರಥಮ ಮಾನವನಿಗೆ ಲಭಿಸಿದ ಅದೇ ಧರ್ಮ. ಅವರೆಲ್ಲರೂ ಒಂದೇ ರೀತಿಯ ಮಾರ್ಗದರ್ಶನವನ್ನು ಪಡೆಯುತ್ತಿದ್ದರು. ನೈತಿಕ ಮತ್ತು ನಾಗರಿಕ ಜೀವನದ ಚಿರಂತನ ತತ್ವಗಳನ್ನೇ ಅವರು ಪ್ರತಿಪಾದಿಸುತ್ತಿದ್ದರು. ಅವರೆಲ್ಲರ ಧ್ಯೇಯವು ತಮ್ಮ ಜನರನ್ನು ಆ ಮಾರ್ಗದರ್ಶನದತ್ತ ಕರೆಯುವುದು, ಅದನ್ನು ಸ್ವೀಕರಿಸಿದವರನ್ನು ಸಂಘಟಿತಗೊಳಿಸುವುದು, ಅಲ್ಲಾಹನ ಕಾನೂನಿಗೆ ಬದ್ಧವಾಗಿರುವ ಮತ್ತು ಲೋಕದಲ್ಲಿ ಆ ಕಾನೂನನ್ನು ಜಾರಿಗೊಳಿಸುವ ಪ್ರಯತ್ನ ಮಾಡುವ ಒಂದು ಸಮುದಾಯವನ್ನು ರಚಿಸುವುದು.

ಅಂತಿಮವಾಗಿ ಅರೇಬಿಯಾದಲ್ಲಿ ಪ್ರವಾದಿ ಮುಹಮ್ಮದ್(ಸ) ಅದೇ ಕೆಲಸಕ್ಕಾಗಿ ನಿಯುಕ್ತರಾದರು. ಸಾಮಾನ್ಯ ಜನರೂ ಹಿಂದಿನ ಪ್ರವಾದಿಗಳ ಅನುಯಾಯಿಗಳ ಪೈಕಿ ಮಾರ್ಗಭ್ರಷ್ಟರಾದವರೂ ಅವರ ಸಂಬೋಧಿತರಾಗಿದ್ದರು. ಎಲ್ಲರನ್ನೂ ನೇರ ಮಾರ್ಗದತ್ತ ಕರೆಯುವುದು, ಎಲ್ಲರಿಗೂ ಹೊಸದಾಗಿ ದೈವಿಕ ಸಂದೇಶವನ್ನು ತಲುಪಿಸುವುದು, ಆ ಸಂದೇಶವನ್ನು ಸ್ವೀಕರಿಸಿದವರನ್ನು ಸಂಘಟಿಸುವುದು, ಅದು ತನ್ನ ಸುಧಾರಣೆಯ ಜತೆಗೆ ಲೋಕ ಕಲ್ಯಾಣಕ್ಕಾಗಿ ಪ್ರಯತ್ನಿಸುವುದು. ಈ ಗ್ರಂಥವೇ ಪವಿತ್ರ ಕುರ್‌ಆನ್ ಆಗಿದೆ. ಇಸ್ಲಾಮ್ ಅಂತಿಮ ದೈವಿಕ ಧರ್ಮ, ಮುಹಮ್ಮದ್(ಸ) ಅಂತಿಮ ಪ್ರವಾದಿ ಮತ್ತು ಪವಿತ್ರ ಕುರ್‌ಆನ್ ಅಂತಿಮ ದೈವಿಕ ಮಾರ್ಗದರ್ಶನವಾಗಿದೆ.

❑

ಧರ್ಮಗಳ ಗೌರವದ ನೈಜ ರೂಪ

ಸರ್ವಧರ್ಮ ಸಮಾನತೆಯ ವಾದದ ಅತ್ಯುತ್ತಮ ಫಲವೇನೆಂದರೆ ಅದರ ಮೂಲಕ ಎಲ್ಲ ಧರ್ಮಗಳ ಬಗ್ಗೆ ಸಮಾನ ಗೌರವ ಉಂಟಾಗುತ್ತದೆ ಮತ್ತು ಮಾನವ ಸೋದರತೆ ಹಾಗೂ ಸಾಮರಸ್ಯ ಉಂಟಾಗುತ್ತದೆ. ತನ್ನ ಧರ್ಮವೇ ಸತ್ಯ, ಅದನ್ನು ಅನುಸರಿಸಿದರೆ ಮಾತ್ರ ಲೌಕಿಕ ಯಶಸ್ಸು ಮತ್ತು ಪಾರತ್ರಿಕ ಮೋಕ್ಷ ಸಿಗಬಲ್ಲದು ಎಂದು ಯಾರಾದರೂ ವಾದಿಸಿದರೆ ಅವನ ಈ ಕಠಿಣ ನಿಲುವಿನಿಂದ ದ್ವೇಷದ ಗೋಡೆಗಳು ನಿರ್ಮಾಣವಾಗಿ ಪರಸ್ಪರ ಅಂತರ ಹೆಚ್ಚುವುದು ಎಂದು ಹೇಳಲಾಗುತ್ತದೆ. ಆದರೆ ಈ ಮಾತು ಬಾಹ್ಯ ನೋಟಕ್ಕೆ ಎಷ್ಟು ಉತ್ತಮ ಮತ್ತು ಮುಗ್ಧವಾಗಿ ಕಾಣಿಸುತ್ತದೋ ವಾಸ್ತವಿಕತೆಯ ದೃಷ್ಟಿಯಿಂದ ಅಷ್ಟೇ ಅಪಾಯಕಾರಿ ಮತ್ತು ಮಾನವಕುಲಕ್ಕೆ ಮಾರಕವಾಗಿದೆ. ಏಕೆಂದರೆ ಈ ರೀತಿ ಹೇಳುವುದರಿಂದ ಧರ್ಮವು ದೇವದತ್ತವಾಗಿರದೆ ಮಾನವ ನಿರ್ಮಿತವಾಗಿದೆ ಎಂಬರ್ಥ ಬರುತ್ತದೆ. ಈ ವಿಶ್ವವನ್ನೂ ಅದರ ಎಲ್ಲ ಸಾಧನಾನುಕೂಲತೆಗಳನ್ನೂ ಮನುಷ್ಯರನ್ನೂ ಸೃಷ್ಟಿಸಿ ಪರಿಪಾಲಿಸುತ್ತಿರುವ ದೇವನು ಜೀವನ ಕ್ರಮದ ಬಗ್ಗೆ ಮಾನವನನ್ನು ಪೂರ್ಣ ಸ್ವತಂತ್ರವಾಗಿ ಬಿಟ್ಟು ಬಿಟ್ಟಿರುತ್ತಾನೆ. ಯಾವ ಧರ್ಮವನ್ನು ಅನುಸರಿಸಿದರೂ ಅಥವಾ ಯಾವುದನ್ನೂ ಅನುಸರಿಸದಿದ್ದರೂ ದೇವನಿಗೇನೂ ಆಕ್ಷೇಪವಿಲ್ಲ. ವಿಶ್ವದ ಸೃಷ್ಟಿಕರ್ತನ ಘನತೆ ಗೌರವಗಳ ಬಗ್ಗೆ ಸ್ವಲ್ಪವಾದರೂ ಪ್ರಜ್ಞೆ ಇರುವವನು ಧರ್ಮಗಳ ಗೌರವದ ಈ ಕಲ್ಪನೆಯನ್ನು ಅಂಗೀಕರಿಸಲಾರ.

ಧರ್ಮದ ವಿಷಯವು ಯಾವುದೇ ಆಟ-ವಿನೋದದ ವಿಷಯವಲ್ಲ. ಅದು ಜೀವನದ ಅತ್ಯಂತ ಗಂಭೀರ ಪ್ರಶ್ನೆಯಾಗಿದೆ. ಅದರ ಸರಿಯಾದ ಅಥವಾ ತಪ್ಪಾದ ಆಯ್ಕೆ ಮತ್ತು ಸ್ವೀಕಾರದ ಮೇಲೆ ಐಹಿಕ ಜೀವನದ ಯಶಸ್ಸು ಮತ್ತು ಪಾರತ್ರಿಕ ಮೋಕ್ಷವು ಅವಲಂಬಿಸಿದೆ. ಆದರೆ ಮನುಷ್ಯನು ತನ್ನ ಜೀವನ ಸಂಗಾತಿಯ ಆಯ್ಕೆ, ಪೇಟೆಯಲ್ಲಿ ಸಿಗುವ ಜೀವನಾವಶ್ಯಕ ಸಾಮಗ್ರಿಗಳ ಆಯ್ಕೆ ಇತ್ಯಾದಿಗಳ ಬಗ್ಗೆ ತೋರುವ ಕಾಳಜಿಯನ್ನೂ ಧರ್ಮದ ಆಯ್ಕೆಯ ಬಗ್ಗೆ ತೋರುತ್ತಿಲ್ಲ ಎಂಬುದು ಅತ್ಯಂತ ವಿಪರ್ಯಾಸದ ಸಂಗತಿ.

ಧರ್ಮಗಳ ಗೌರವದ ಈ ಕೃತಕ ರೂಪವನ್ನು ಇಸ್ಲಾಮ್ ಖಂಡಿಸುತ್ತದೆ. ಅದು ಮಾನವತೆಗೂ ಖಂಡಿತ ಉಪಯುಕ್ತವಾಗಲಾರದು. ರಾಜಕೀಯ ವ್ಯವಸ್ಥೆ, ಆರ್ಥಿಕ ವ್ಯವಸ್ಥೆ

ಇತ್ಯಾದಿಗಳ ಆಯ್ಕೆಯಲ್ಲಿ ಮನುಷ್ಯನು ಈ ನಿಯಮವನ್ನು ಪಾಲಿಸುವುದಿಲ್ಲ. ಯಾವ ರಾಜಕೀಯ ಪಕ್ಷವಾದರೂ ಸರಿಯೆ ಅಥವಾ ಯಾವ ಆರ್ಥಿಕ ವ್ಯವಸ್ಥೆಯಾದರೂ ಸರಿಯೆ ಎಂಬ ಭಾವನೆ ಯಾರಲ್ಲೂ ಇರುವುದಿಲ್ಲ. ಅಂದ ಮೇಲೆ ಕೇವಲ ಧಾರ್ಮಿಕ ವಿಷಯದಲ್ಲಿ ಈ ಉದಾಸೀನ ಭಾವನೆಯು ಒಂದು ಕೃತಕ ರೂಪವಲ್ಲದೆ ಇನ್ನೇನು? ಇನ್ನು ಎಲ್ಲ ಧರ್ಮವನ್ನು ಗೌರವದ ದೃಷ್ಟಿಯಿಂದ ನೋಡುವುದು, ಎಲ್ಲ ಧಾರ್ಮಿಕ ವ್ಯಕ್ತಿಗಳನ್ನೂ, ಸಂಕೇತಗಳನ್ನೂ ಗೌರವಿಸುವುದು ಎಲ್ಲ ಧರ್ಮಗಳ ಅನುಯಾಯಿಗಳೂ ಪಾಲಿಸಬೇಕಾದ ಕರ್ತವ್ಯವಾಗಿದೆ. ಇಸ್ಲಾಮ್ ಇದನ್ನು ಕಟ್ಟುನಿಟ್ಟಾಗಿ ಆದೇಶಿಸಿದೆ. ಅದು ಯಾವುದೇ ಧರ್ಮದವರ ಮನನೋಯಿಸುವುದನ್ನು ಅನುಮತಿಸುವುದಿಲ್ಲ. ಬಹುದೇವ ವಿಶ್ವಾಸವನ್ನು ಇಸ್ಲಾಮ್ ಎಷ್ಟು ಉಗ್ರವಾಗಿ ಖಂಡಿಸಿದ್ದರೂ ದೇವಿ-ದೇವತೆಗಳ ಬಗ್ಗೆ ನಿಂದನೆಯ ಮಾತು ಆಡುವುದರಿಂದ ಪವಿತ್ರ ಕುರ್‌ಆನ್ ಸ್ಪಷ್ಟವಾಗಿ ತಡೆದಿದೆ. (ನೋಡಿರಿ: ಅಲ್ ಅನ್‌ಆಮ್: 108) ಯಾವ ಧರ್ಮಕ್ಕೆ ಸೇರಿದವರಾಗಿದ್ದರೂ ಮಾನವರೆಲ್ಲರೂ ಪರಸ್ಪರ ಸಹೋದರರೆಂದು ಇಸ್ಲಾಮ್ ಸಾರುತ್ತದೆ. ಹಸಿದವನಿಗೆ ಉಣಬಡಿಸುವ ಬಗ್ಗೆ, ನೆರೆಕರೆಯವರ ಹಕ್ಕುಗಳನ್ನು ಸಲ್ಲಿಸುವ ಬಗ್ಗೆ, ಜೀತದಲ್ಲಿ ಸಿಲುಕಿದವರನ್ನು ವಿಮೋಚಿಸುವ ಬಗ್ಗೆ, ಅನ್ಯಾಯಕ್ಕೊಳಗಾದವರಿಗೆ ನೆರವಾಗುವ ಬಗ್ಗೆ, ಒಳಿತಿನ ಕಾರ್ಯಗಳಲ್ಲಿ ಸಹಕರಿಸುವ ಬಗ್ಗೆ ಹಾಗೂ ಕೆಡುಕಿನ ಕಾರ್ಯಗಳಲ್ಲಿ ಸಹಕರಿಸದಿರುವ ಬಗ್ಗೆ ಅದು ಮಾನವರ ಮಧ್ಯೆ ಧರ್ಮದ ಆಧಾರದಲ್ಲಿ ಯಾವುದೇ ತಾರತಮ್ಯ ಮಾಡುವುದಿಲ್ಲ.

❑